# ಬೃಹಚ್ಚರಣ

ಸಂಘದ ತ್ರೈಮಾಸಿಕ ವಾರ್ತಾ ಪತ್ರಿಕ

| ಸಂಘದ ಸದಸ್ಯರಾಗಿ | | |
|---|---|---|
| ಮಹಾ ಪೋಷಕರು | – | ₹ 25,000/– |
| ಪೋಷಕರು | – | ₹ 5,000/– |
| ಸದಸ್ಯತ್ವ | – | ₹ 1000/– |
| ವಾರ್ಷಿಕ ನಿರ್ವಹಣೆ | – | ₹ 500/– |

ಸಂಪುಟ : 13 ಸಂಚಿಕೆ : 1 ಖಾಸಗಿ ಪ್ರಸಾರಕ್ಕಾಗಿ ಜನವರಿ–ಮಾರ್ಚ್2022

General Email : queries@mmdbs.in ಲೇಖನಗಳಿಗಾಗಿ magzines@mmdbs.in Web : mmbbs.in


## ನಾಗಾರಾಧನೆ – ಮಹಿಳಾ ವಿಶೇಷಾಂಕ

### ಅರ್ಪಣೆ



ರಾಮಕ್ಕಮ್ಮ

### ಅಧ್ಯಕ್ಷರ ನುಡಿ

ಶುಭಕೃತ್ ನಾಮ ಸಂವತ್ಸರ ಪ್ರಾರಂಭ ಸಮಯದಲ್ಲಿ ಶುಭ ಆಶಯಗಳು! ನೂತನ ವರ್ಷವು ನಿಮಗೆಲ್ಲರಿಗೂ ಆಯುರಾರೋಗ್ಯ ಐಶ್ವರ್ಯಗಳನ್ನು ತರಲೆಂದು ಹಾರೈಸುತ್ತೇನೆ.

ದಿ. 3.7.2022ರಂದು (ಭಾನುವಾರ) 2021–22ನೇ ಸಾಲಿನ ಸರ್ವಸದಸ್ಯರ ಸಭೆಯನ್ನು ನಡೆಸಲು ನಿರ್ಧರಿಸಲಾಗಿದೆ. ಆ ಸಂದರ್ಭದಲ್ಲಿ ಕಳೆದ ಎರಡು ವರ್ಷಗಳ ಅಂತಿಮ ಪರೀಕ್ಷೆಗಳಲ್ಲಿ ಯಶಸ್ಸುಗಳಿಸಿದ (ಬೃಹಚ್ಚರಣ ಪರಿವಾರಗಳಲ್ಲಿನ) ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಂಘದ ವತಿಯಿಂದ ಅಭಿನಂದನಾಪೂರ್ವಕವಾಗಿ ಪ್ರತಿಭಾ ಪುರಸ್ಕಾರಗಳನ್ನು ನೀಡಲು ನಿರ್ಧರಿಸಲಾಗಿದೆ. ವಿವರಗಳು ಒಳಪುಟದಲ್ಲಿ ಲಭ್ಯವಿವೆ.

ಎಲ್ಲರಿಗೂ ಒಳ್ಳೆಯದಾಗಲಿ!



ಬಿ. ಸುಬ್ರಹ್ಮಣ್ಯಂ
ಅಧ್ಯಕ್ಷರು

### ಕಾರ್ಯದರ್ಶಿ ನುಡಿ.

ಸದಸ್ಯರಿಗೆ ಮತ್ತವರ ಪರಿವಾರವರ್ಗಕ್ಕೆ ನಮಸ್ಕಾರಗಳು

ಪ್ರತಿ ವರ್ಷದಂತೆ ಇದೇ 2022ರ ಮಾರ್ಚ್ ತಿಂಗಳಲ್ಲಿ ನಡೆದ 'ನಾಗಾರಾಧನೆ'ಯು ನಮ್ಮ ಸಮುದಾಯದವರ ಸಹಕಾರದೊಂದಿಗೆ ಶ್ರದ್ಧಾ ಭಕ್ತಿಯಿಂದ ನಡೆಯಿತು.

ಈ ಕಾರ್ಯದಲ್ಲಿ ಭಾಗವಹಿಸಿದ ಎಲ್ಲ ಸದಸ್ಯರಿಗೆ, ಭಕ್ತಾದಿಗಳಿಗೆ, ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ಹಾಗೂ ವಿಶೇಷವಾಗಿ ನಮಗೆ ಸಹಕಾರ ನೀಡಿದ ಶ್ರೀ ಸೂರ್ಯನಾರಾಯಣ ದೀಕ್ಷಿತರು ಹಾಗೂ ಅವರ ಕುಟುಂಬದವರಿಗೆ ಧನ್ಯವಾದಗಳು.

ನಾಗಾರಾಧನೆ ಸಂದರ್ಭದಲ್ಲಿ ಉದಾರವಾಗಿ ಧನ ಸಹಾಯ ಮತ್ತು ಅನ್ನ ಸಂತರ್ಪಣೆಯಲ್ಲಿ ಸಿಹಿ ಪದಾರ್ಥಗಳು, ಕುಡಿಯುವ ನೀರು ಮತ್ತು ಬಾಣಸಿಗರಿಗೆ ವಸ್ತ್ರಗಳನ್ನು ಒದಗಿಸಿದ ಸಮುದಾಯದ ಪ್ರಾಯೋಜಕರಿಗೆ ಹಾಗೂ ಭಕ್ತಾದಿಗಳಿಗೆ ವಂದನೆಗಳು.

ಇದೇ ಮೇ ತಿಂಗಳ 6ರಂದು 'ಶ್ರೀ ಶಂಕರ ಜಯಂತಿ' ಪ್ರಯುಕ್ತ ಸಂಗೀತ ಕಾರ್ಯಕ್ರಮವನ್ನು ಬೆಂಗಳೂರಿನ ಬಸವನಗುಡಿಯ "ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ" ಆವರಣದಲ್ಲಿ ಆಯೋಜಿಸುವ ಉದ್ದೇಶವಿದ್ದು, ಅಂದು ಕಾರ್ಯಕ್ರಮದಲ್ಲಿ ಸಮುದಾಯದ ಕುಟುಂಬದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ವಿನಂತಿ.



ಶುಭಕೃತ್ ಸಂವತ್ಸರವು ಎಲ್ಲರಿಗೂ ಒಳಿತನ್ನು ಉಂಟುಮಾಡಲಿ ಎಂಬ ಪ್ರಾರ್ಥನೆಯೊಂದಿಗೆ, ಧನ್ಯವಾದಗಳು.

ಎಸ್.ಸಿ.ಶ್ರೀನಿವಾಸ
ಕಾರ್ಯದರ್ಶಿ

### ಸಂಪಾದಕೀಯ

ಸಮುದಾಯದ ಆತ್ಮೀಯ ಬಂಧುಗಳೆ,

ಈ ಸಂಚಿಕೆಯನ್ನು "ನಾಗಾರಾಧನೆ"ಯ ವರದಿ ಜೊತೆಗೆ "ಮಹಿಳಾ ದಿನಾಚರಣೆ"ಯ ಅಂಗವಾಗಿ ಪ್ರಕಟಿಸಿ, ನಮ್ಮ ಸಮುದಾಯದ ಮಹಿಳಾ ಸಾಧಕಿಯಾದ ದಿ. ರಾಮಕ್ಕಮ್ಮನವರಿಗೆ ಅರ್ಪಿಸಿದೆ. ಅಲ್ಲದೆ ಹೆಚ್ಚಿನ ಲೇಖನಗಳು ಮತ್ತು ಛಾಯಾಚಿತ್ರಗಳು ಮಹಿಳೆಯರಿಗೆ ಮೀಸಲಾಗಿದೆ.

ಜುಲೈ–ಸೆಪ್ಟೆಂಬರ್ 2022ರ ಸಂಚಿಕೆಗಾಗಿ ನಮ್ಮ ದೇಶದ 75 ವರ್ಷಗಳ ಸ್ವಾತಂತ್ರ್ಯೋತ್ಸವದ ಸಂಭ್ರಮ ಆಚರಣೆಯ ಸಂದರ್ಭದಲ್ಲಿ ಸಮುದಾಯದವರಿಂದ ಸ್ವಾತಂತ್ರ್ಯದ ಬಗ್ಗೆ ಲೇಖನ ಹಾಗೂ ಛಾಯಾಚಿತ್ರಗಳನ್ನು ಆಹ್ವಾನಿಸಿದೆ. ಈ ಲೇಖನಗಳಲ್ಲಿ ರಾಜಕೀಯ, ಜಾತಿ ಮತ್ತು ಇನ್ನಿತರ ವಿವಾದಾತ್ಮಕ ವಿಷಯಗಳು ಇರದಂತಿರಬೇಕು.

**ಹೀಗೊಂದು ಅನಿಸಿಕೆ !**

ನಮ್ಮ ದಿನನಿತ್ಯ ಅಗತ್ಯಗಳನ್ನು ಪೂರೈಸುವ ವ್ಯಕ್ತಿಗಳ ಅಂದರೆ ಹಾಲು, ದಿನಪತ್ರಿಕೆ, ದಿನಸಿ, ತರಕಾರಿ ಮತ್ತು ಹಣ್ಣು ಮಾರಾಟಗಾರರ, ಪೌರ ಕಾರ್ಮಿಕರ, ಕೊರಿಯರ್, ಆಟೋ ಹಾಗೂ ಕ್ಯಾಬ್ ಚಾಲಕರ ಮತ್ತು ಇತರರ ಸಹಾಯ ಸೇವೆಯನ್ನು ಪ್ರತಿದಿನ ಪಡೆಯುತ್ತಿದ್ದೇವೆ. ಇದಕ್ಕೆ ತಕ್ಕುದಾದ ಹಣ ನೀಡಿದರೂ ಸುಲಭವಾಗಿ ನಾವು ಮಾಡಲಾಗದ ಕೆಲಸವನ್ನು ಅವರು ಮಾಡುತ್ತಿರುವುದರಿಂದ ಅವರ ಬಗ್ಗೆ ಮತ್ತು ಅವರ ವೃತ್ತಿಯ ಬಗ್ಗೆ ಕೃತಜ್ಞತಾ ಭಾವವಿರಬೇಕು. ಈ ನಿಟ್ಟಿನಲ್ಲಿ ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ.



ಆರ್. ರಮೇಶ್
ಸಂಪಾದಕರು



ದಿ.7.3.2022ರಂದು ನಡೆದ
ಶ್ರೀ ಶ್ರೀನಿವಾಸ ದೇವರ ಕಲ್ಯಾಣೋತ್ಸವ

### ಧನ್ಯವಾದಗಳು

ಸಂಘದ ಪೋಷಕಿ ಶ್ರೀಮತಿ ಎಸ್.ನಳಿನಿರವರ ತಂದೆ ಮತ್ತು ತಾಯಿ ಹಾಗೂ ಸಂಘದ ಅಧ್ಯಕ್ಷ ಶ್ರೀ ಬಿ.ಸುಬ್ರಹ್ಮಣ್ಯಂ ರವರ ಅತ್ತೆ ಮತ್ತು ಮಾವನವರಾದ ಶ್ರೀ ಆರ್.ಎಸ್.ರಾವ್ ಹಾಗೂ ಶ್ರೀಮತಿ ಸುಲೋಚನ ಆರ್.ರಾವ್‌ರವರು ನಮ್ಮ ಸಂಘದ ಅನ್ನಸಂತರ್ಪಣೆ ಮತ್ತು ವಿದ್ಯಾನಿಧಿಗೆಂದು ರೂ 1,00,000/– ಗಳನ್ನು ದೇಣಿಗೆಯಾಗಿ ನೀಡಿರುತ್ತಾರೆ.

ನಮ್ಮ ಸಂಘದ ಮೇಲಿನ ಅಭಿಮಾನದಿಂದ ಈ ದಂಪತಿಗಳು ಮತ್ತೊಮ್ಮೆ ದೇಣಿಗೆ ನೀಡುತ್ತಿರುವುದು ಸಂಘದ ಬಗ್ಗೆ ಅವರಿಗಿರುವ ಅಭಿಮಾನವನ್ನು ತೋರುತ್ತದೆ.

ಈ ಹಿರಿಯ ದಂಪತಿಗಳಿಗೆ ಭಗವಂತನು ಆಯುರಾರೋಗ್ಯ ಹಾಗೂ ನೆಮ್ಮದಿಯ ಜೀವನ ಕೊಡಲೆಂದು ಸಂಘವು ಪ್ರಾರ್ಥಿಸುತ್ತದೆ.







## ಸಹಸ್ರ ಚಂದ್ರ ದರ್ಶನ

ಹಿರಿಯ ಸದಸ್ಯ ಶ್ರೀ ಜಿ.ಎಸ್.ವೆಂಕಟೇಶ್ ಮತ್ತು ಶ್ರೀಮತಿ ಗಾಯತ್ರಿ ದಂಪತಿಗಳು ದಿನಾಂಕ 19.1.2022ರಂದು ಶ್ರೀಯುತರ 80 ವರ್ಷದ ಹುಟ್ಟುಹಬ್ಬದ ಅಂಗವಾಗಿ ಸಹಸ್ರ ಚಂದ್ರ ದರ್ಶನ ಹಾಗೂ ಶಾಂತಿ ಹೋಮ ನೆರವೇರಿಸಿಕೊಂಡರು.

ಹಿರಿಯ ದಂಪತಿಗಳಿಗೆ ಆಯಸ್ಸು ಮತ್ತು ಆರೋಗ್ಯ ಕರುಣಿಸಲೆಂದು ಭಗವಂತನನ್ನು ಸಂಘವು ಪ್ರಾರ್ಥಿಸುತ್ತದೆ.



**2020ರ ಕ್ಯಾಲೆಂಡರ್ ಬಿಡುಗಡೆ ↑**



**ಸದಸ್ಯ ಶ್ರೀ ಆರ್. ಎನ್. ಮಂಜುನಾಥರವರಿಗೆ "ರಾಜರಾಜೇಶ್ವರಿ ರತ್ನ" ಪ್ರಶಸ್ತಿ ದೊರಕಿದೆ**

← ದಿ. 8.3.2022ರಂದು ನಡೆದ ಶ್ರೀಶ್ರೀನಿವಾಸ ದೇವರ ರಥೋತ್ಸವ



ಸದಸ್ಯ ಶ್ರೀ ಎನ್.ವಿ.ಸೂರ್ಯಪ್ರಕಾಶ್ ಮತ್ತು ಶ್ರೀಮತಿ ಜಲಜಾ ಎಸ್. ಪ್ರಕಾಶ್ ರವರ ಪುತ್ರ ಚಿ. ಅವಿನಾಶ್‌ರವರ ವಿವಾಹವು ಶ್ರೀಮತಿ ಜಯಂತಿ ರಾಜನ್ ಮತ್ತು ಶ್ರೀ ಎಸ್.ಎಸ್.ರಾಜನ್‌ರವರ ಪುತ್ರಿ ಕುಮಾರಿ ಅರ್ಚನಾ ರಾಜನ್ ರವರೊಂದಿಗೆ ದಿನಾಂಕ 6.4.2022ರಂದು ಬೆಂಗಳೂರಿನಲ್ಲಿ ನೆರವೇರಿತು. →



← ಹಿರಿಯ ಸದಸ್ಯ ಶ್ರೀ ವಿ.ಛಾಯಾಪತಿ ಮತ್ತು ಶ್ರೀಮತಿ ಗಾಯತ್ರಿರವರ ಪುತ್ರ ಚಿ. ಸಿ.ಆದಿತ್ಯರವರ ವಿವಾಹವು ಹಿರಿಯ ಸದಸ್ಯ ಶ್ರೀ ಹೆಚ್.ಪಿ.ಶ್ರೀನಿವಾಸ್ ಮತ್ತು ಶ್ರೀಮತಿ ಸರ್ವಮಂಗಳರವರ ಮೊಮ್ಮಗಳು ಮತ್ತು ಶ್ರೀಮತಿ ಹೆಚ್.ಎಸ್.ಜ್ಞಾನಶ್ರೀ ಹಾಗೂ ಶ್ರೀ ಆರ್.ಶಂಕರ್‌ರವರ ಪುತ್ರಿ ಕುಮಾರಿ ಐಶ್ವರ್ಯರವರೊಂದಿಗೆ ದಿನಾಂಕ 6.3.2022ರಂದು ಬೆಂಗಳೂರಿನಲ್ಲಿ ನೆರವೇರಿತು.



ಹಿರಿಯ ಸದಸ್ಯ ಶ್ರೀ ಆರ್.ಎಸ್.ಪದ್ಮನಾಭನ್ ಮತ್ತು ಶ್ರೀಮತಿ ಆರ್.ಪಿ.ತಂಗಮಣಿರವರ ಮೊಮ್ಮಗ ಹಾಗೂ ಸದಸ್ಯೆ ಶ್ರೀಮತಿ ಆರ್.ಪಿ.ನಿರ್ಮಲ ಮತ್ತು ಶ್ರೀ ಎನ್.ರಾಮಕೃಷ್ಣರವರ ಪುತ್ರ ಚಿ. ಸುಪ್ರೀತ್ ರಾಘವೇಂದ್ರರವರ ವಿವಾಹವು ಶ್ರೀಮತಿ ವಸುಂಧರ ಹಾಗೂ ಶ್ರೀ ರವಿಕುಮಾರರವರ ಪುತ್ರಿ ಕುಮಾರಿ ವೃಂದರವರೊಂದಿಗೆ ದಿನಾಂಕ 20.2.2022 ರಂದು ಬೆಂಗಳೂರಿನಲ್ಲಿ ನೆರವೇರಿತು. →



← ಹಿರಿಯ ಸದಸ್ಯೆ ಶ್ರೀಮತಿ ಕೆ.ಎಲ್.ಶಾಂತಾ ಮತ್ತು ದಿವಂಗತ ಹೆಚ್.ಡಿ.ಸುಬ್ರಹ್ಮಣ್ಯರವರ ಪುತ್ರಿ ಕುಮಾರಿ ಶ್ರೀದೇವಿಯವರ ವಿವಾಹವು ಶ್ರೀಮತಿ ಅಹಲ್ಯಾದೇವಿ ಮತ್ತು ಶ್ರೀ ಜಿ.ಶಿವರಾಮ್ ರವರ ಪುತ್ರ ಚಿ. ಶ್ರೀಧರ್ ಭಾರದ್ವಾಜ್‌ರವರೊಂದಿಗೆ ದಿನಾಂಕ 27.3.2022 ರಂದು ಬೆಂಗಳೂರಿನಲ್ಲಿ ನೆರವೇರಿತು.

**ಮೈ.ಮಂ.ದ್ರಾ. ಬೃಹಚ್ಚರಣ ಸಂಘ**
(ಅಖಿಲ ಕರ್ನಾಟಕಬ್ರಾಹ್ಮಣ ಮಹಾಸಭಾದ ಅಂಗಸಂಸ್ಥೆ)
**ಕಾರ್ಯಕಾರಿ ಸಮಿತಿ**
ಶ್ರೀಯುತರುಗಳಾದ
**ಬಿ. ಸುಬ್ರಹ್ಮಣ್ಯಂ, 9449869667**
ಅಧ್ಯಕ್ಷರು
**ಎಚ್.ಕೆ. ಶಶಿಧರ್, 9845173766**
ಉಪಾಧ್ಯಕ್ಷರು
**ಎಸ್.ಸಿ. ಶ್ರೀನಿವಾಸ, 9483725949**
ಕಾರ್ಯದರ್ಶಿ
**ಅರುಣ್ ವಿ., 9880166001**
ಸಹಕಾರ್ಯದರ್ಶಿ
**ಎಸ್. ಸತ್ಯನಾರಾಯಣ, 9980945699**
ಖಜಾಂಚಿ
**ಟಿ.ಪಿ. ಸೂರ್ಯನಾರಾಯಣ, 9945484268**
ಸಹಖಜಾಂಚಿ
**ಆರ್. ಗಣೇಶ್ ಶ್ರೀಧರ್, 9880187686**
ಆಂತರಿಕ ಲೆಕ್ಕ ಪರಿಶೋಧಕರು
**ಸದಸ್ಯರು**
**ಜಿ.ವೆಂಕಟೇಶ್, 9916067503**
**ಕೆ. ಗುಂಡಪ್ಪ, 9845332315**
**ಕೆ.ಬಿ.ಎಸ್. ಶರ್ಮ, 9482087344**
**ಸರಸ್ವತೀ ನಟರಾಜನ್, 9480619730**
**ನಾಗೇಶ, 9980662118**
**ಕೆ.ಮಂಜುನಾರಾಯಣ್, 9886114279**
**ಕೆ.ಎಸ್. ಅರುಣ್, 9900313929**
**ಕೆ.ಎಸ್. ಅನಂತ, 9740444222**
**ಆರ್.ಎ. ಶ್ಯಾಮಸುಂದರ್, 9845205674**
**ಆರ್. ರಮೇಶ್, 9886034048**
**ಲಲಿತಾ ರಮೇಶ್, 9945199637**
**ಬಿ.ಆರ್. ಅನಿಲ್ ರಮೇಶ್, 9980027189**
ಲೆಕ್ಕಪರಿಶೋಧಕರು
**ಬಿ.ಎನ್. ಗೋವಿಂದ್ ಪ್ರಸಾದ್, 9845128229**

**'ಬೃಹಚ್ಚರಣ' ಪತ್ರಿಕೆಯ ಸಂಪಾದಕ ಮಂಡಳಿ**
ಸಂಘದ **ಅಧ್ಯಕ್ಷರು** ಹಾಗೂ **ಕಾರ್ಯದರ್ಶಿ**
**ಆರ್. ರಮೇಶ್, 9886034048**
ಸಂಪಾದಕರು
**ಕೆ.ಸಿ. ನಟರಾಜನ್, 9845113475**
ಸಲಹೆಗಾರರು
**ಲಲಿತಾ ರಮೇಶ್, 9945199637**
ಸದಸ್ಯರು
**ಬಿ.ಆರ್. ಅನಿಲ್ ರಮೇಶ್, 9980027189**
ಸದಸ್ಯರು
**ಎನ್. ಶಿವಕುಮಾರ್, 9886505505**
ಛಾಯಾಗ್ರಾಹಕರು

# ಪ್ರತಿಭಾ ಪುರಸ್ಕಾರಕ್ಕೆ ಅರ್ಹತಾ ವಿವರಗಳು

ಈ ವರ್ಷದ 3.7.2022ರಂದು (ಭಾನುವಾರ) 2021–22ನೇ ಸಾಲಿನ ಸರ್ವಸದಸ್ಯರ ಸಭೆಯನ್ನು ನಡೆಸಲು ನಿರ್ಧರಿಸಲಾಗಿದೆ.

ಆ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಪದವಿ, ಸ್ನಾತಕೋತ್ತರ, ಸಂಗೀತ, ನೃತ್ಯ, ಚಿತ್ರಕಲೆ ಮತ್ತು ಇನ್ನಿತರ ಯಾವುದೇ ಪರೀಕ್ಷೆಯಲ್ಲಿ (2020–21 ಮತ್ತು 2021–2022ನೇ ಸಾಲಿನ ಅಂತಿಮ ಪರೀಕ್ಷೆಗಳಲ್ಲಿ) ಶೇಕಡ 60ಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸಿ ಉತ್ತೀರ್ಣರಾಗಿರುವ ಬೃಹಚ್ಚರಣ ಪರಿವಾರಗಳಲ್ಲಿನ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಂಘದ ವತಿಯಿಂದ ಅಭಿನಂದನಾ ಪೂರ್ವಕವಾಗಿ ಪ್ರತಿಭಾ ಪುರಸ್ಕಾರಗಳನ್ನು ನೀಡಲು ನಿರ್ಧರಿಸಲಾಗಿದೆ.

ಯಶಸ್ವಿಯಾಗಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ತಮ್ಮ ವಿವರಗಳನ್ನು 15.06.2022ರೊಳಗಾಗಿ ಕಾರ್ಯಕಾರಿ ಸಮಿತಿಯ ಕೆಳಕಂಡ ಸದಸ್ಯರಿಗೆ ವೈಯುಕ್ತಿಕವಾಗಿ ಅಥವಾ ಕೆಳ ಕಾಣಿಸಿದ ಇ–ಮೇಲ್ ಗೆ ಕಳುಹಿಸಬೇಕಾಗಿ ವಿನಂತಿ.

**ಶ್ರೀ ಅರುಣ್ ವಿ. (9845099377)**
**ಶ್ರೀ ನಾಗೇಶ್ (8618866112)**
ಇ–ಮೇಲ್: queries@mmdbs.in

**ಕಳುಹಿಸಬೇಕಾದ ವಿವರಗಳು:**
* ಹೆಸರು
* ತಂದೆ–ತಾಯಿಯ ಹೆಸರು
* ತಂದೆ ಮತ್ತು ತಾಯಿಯದೂರವಾಣಿ ಸಂಖ್ಯೆಗಳು
* ಹುಟ್ಟಿದ ದಿನಾಂಕ
* ವಿಳಾಸ
* ಅಂತಿಮ ಪರೀಕ್ಷೆಯ ದರ್ಜೆ
* ಗಳಿಸಿದ ಶೇಕಡ ಅಂಕಗಳು
* ಅಂತಿಮ ಪರೀಕ್ಷೆ ನಡೆದ ತಿಂಗಳು, ವರ್ಷ

ಜೊತೆಗೆ ಅಂಕಪಟ್ಟಿಯ ಛಾಯಪ್ರತಿಯನ್ನು (marks card ಅನ್ನು) ಲಗತ್ತಿಸಬೇಕು.

## ಅಭಿನಂದನೆಗಳು

ಸಂಘದ ಹಿತೈಷಿ ಹಾಗೂ ದಾನಿಗಳಾದ ಶ್ರೀ ಶ್ರೀಹರಿ ಉಡುಪರವರು ನಮ್ಮ ಸಂಘದ ವಿದ್ಯಾನಿಧಿಗೆಂದು ರೂ 25,000/–ಗಳನ್ನು ದೇಣಿಗೆಯಾಗಿ ನೀಡಿರುತ್ತಾರೆ. ನಮ್ಮ ಸಂಘದ ಮೇಲಿನ ಅಭಿಮಾನದಿಂದ ಶ್ರೀಯುತರು ಅವ್ಯಾಹತವಾಗಿ ದೇಣಿಗೆ ನೀಡುತ್ತಿರುವುದು ವಿದ್ಯೆಯ ಬಗ್ಗೆ ಅವರಿಗಿರುವ ಕಳಕಳಿಯನ್ನು ತೋರುತ್ತದೆ.

ಶ್ರೀಮತಿ ಮತ್ತು ಶ್ರೀ ಉಡುಪ ದಂಪತಿಗಳಿಗೆ ಆರೋಗ್ಯ ಪೂರ್ಣ, ನೆಮ್ಮದಿಯ ಜೀವನವನ್ನು ಕರುಣಿಸಬೇಕೆಂದು ಸಂಘವು ಭಗವಂತನಲ್ಲಿ ಪ್ರಾರ್ಥಿಸುತ್ತದೆ.

ಅರ್ಪಣೆ

# ರಾಮಕ್ಕಮ್ಮ
# ಸಾಧಕಿ–ಹೋರಾಟಗಾರ್ತಿ

ನಮ್ಮ ಸಮುದಾಯದಲ್ಲಿ ಪ್ರೀತಿಯಿಂದ ರಾಮಕ್ಕಮ್ಮ ಎಂದೇ ಗುರುತಿಸಲ್ಪಡುವ ಹೆಚ್.ಕೆ.ರಮಾಮಣಿಯಮ್ಮನವರು 1910ರಲ್ಲಿ ನಾಲ್ಕು ಸಹೋದರರು ಮತ್ತು ಮೂರು ಸಹೋದರಿಯರಲ್ಲಿ ಒಬ್ಬರಾಗಿ ಜನಿಸಿದರು. ಅವರ ವಿವಾಹವು 12ನೆ ವಯಸ್ಸಿನಲ್ಲಿ ಜಮೀನ್ದಾರರಾದ ಹೊಸಕೋಟೆ ಕೃಷ್ಣಮೂರ್ತಿಯವರೊಂದಿಗೆ ನಡೆಯಿತು. ಈ ದಂಪತಿಗಳಿಗೆ ಹೆಚ್.ಕೆ.ಶ್ರೀನಿವಾಸ್ ಮತ್ತು ಆರ್.ಲಕ್ಷ್ಮೀದೇವಿ (ಅಮ್ಮಯ್ಯಮ್ಮ) ಎಂಬ ಇಬ್ಬರು ಮಕ್ಕಳು.

ರಾಮಕ್ಕಮ್ಮನವರು ತಮ್ಮ 20ನೇ ವಯಸ್ಸಿನಲ್ಲಿ ಪತಿಯನ್ನು ಕಳೆದುಕೊಂಡರು. ಅವರು ಅದುವರೆಗೂ ಯಾವುದೇ ಶಾಲೆಯಲ್ಲಿ ಶಿಕ್ಷಣ ಪಡೆದಿರಲಿಲ್ಲ. ಆ ಘಟ್ಟದಲ್ಲಿ ತಮ್ಮ ಕುಟುಂಬದವರ ಸಹಾಯದಿಂದ ಓದಲು ಮತ್ತು ಬರೆಯಲು ಕಲಿತರು. ಶ್ರಮಪೂರ್ವಕವಾದ ಈ ಯಶಸ್ವಿ ಕಲಿಕೆ ಅವರು ತಮ್ಮ ಮಕ್ಕಳನ್ನು ಬೆಳೆಸಿ ಕುಟುಂಬವನ್ನು ನಿಭಾಯಿಸುವಲ್ಲಿ ಮೊದಲ ಹೆಜ್ಜೆಯಾಯಿತು.

ರಾಮಕ್ಕಮ್ಮನವರು "ಮಾರುತಿ ವಿದ್ಯಾ ಸಂಸ್ಥೆ"ಯನ್ನು ಕಾಟನ್ ಪೇಟೆಯ ಶ್ರೀರಾಮಮಂದಿರ ದೇವಾಲಯದಲ್ಲಿ ಪ್ರಾರಂಭಿಸಿದರು. ಅವರ ಸಹೋದರರು ಮತ್ತು ಹತ್ತಿರದ ಕುಟುಂಬ ವರ್ಗದವರು ಆ ಸಂಸ್ಥೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಕಾಟನ್‌ಪೇಟೆಯ ನೇಕಾರರ ಮಕ್ಕಳಿಗೆ ತಮ್ಮ ಶಾಲೆಯಲ್ಲಿ ಶಿಕ್ಷಣವನ್ನು ಪಡೆಯಲು ಅನುಕೂಲ ಮಾಡಿಕೊಟ್ಟರು. ನಂತರ ಈ ಶಾಲೆಯನ್ನು ಬಳೇಪೇಟೆಗೆ ಸ್ಥಳಾಂತರಿಸಿ, ಅಲ್ಲಿದ್ದ ಆರ್ಥಿಕವಾಗಿ ಹಿಂದುಳಿದ ಮಕ್ಕಳನ್ನು ಶಾಲೆಗೆ ಶಿಕ್ಷಣ ಪಡೆಯಲು ಪ್ರೇರೇಪಿಸಿದರು. ಈ ಪರಿಶ್ರಮಕ್ಕೆ ಪೂರಕವಾಗಿ ಶಾಲೆಗೆ ಆಗಿನ ರಾಜ್ಯ ಸರ್ಕಾರದ ಅಂಗೀಕಾರವೂ ದೊರಕಿತು. ರಾಮಕ್ಕಮ್ಮನವರ ನಿವೃತ್ತಿಯ ನಂತರ ಅವರ ಸೋದರಿಯ ಮಗ ವಿಶ್ವನಾಥ್ ಮತ್ತು ಅವರ ಸೋದರನ ಮಗಳು ಗೀತಾ ಅವರು ಶಾಲೆಯನ್ನು ಮುಂದುವರೆಸಿದರು. ನಂತರ ಓದುವ ಮಕ್ಕಳ ಸಂಖ್ಯೆ ಇಳಿಮುಖವಾದ್ದರಿಂದ 2005ರಲ್ಲಿ ಅನಿವಾರ್ಯವಾಗಿ ಶಾಲೆಯನ್ನು ಮುಚ್ಚಬೇಕಾಯಿತು.



ರಾಮಕ್ಕಮ್ಮನವರಿಗೆ ಅಸಾಧಾರಣ ಸ್ಮರಣೆಯಿ ದ್ದುದರಿಂದ ನಮ್ಮ ಸಮುದಾಯದವರೆಲ್ಲರ ಪರಿಚಯವಿತ್ತು. ಅವರಿಗೆ ಸಮಾಜ ಸೇವಾ ಮನೋಭಾವವಿದ್ದುದರಿಂದ ನಿವೃತ್ತಿಯಾದ ನಂತರವೂ ಅವರು ತಮ್ಮ ಅನುಭವ ದಿಂದ ಸಮುದಾಯದ ಕುಟುಂಬಗಳಲ್ಲಿ ವಿವಾಹ, ಜನನ ಮತ್ತು ಬಾಣಂತನ ಸಂದರ್ಭಗಳಲ್ಲಿ ಸಹಾಯ ಹಸ್ತವನ್ನು ನಿಷ್ಕಾಮವಾಗಿ ಮಾಡುತ್ತಿದ್ದರು.

ರಾಮಕ್ಕಮ್ಮನವರ ಶುಭಹಾರೈಕೆಯಿಂದ ಈ ಪರಂಪರೆಯು ಅಳಿಯಂದಿರಾದ ವಾಣಿ ಎಲೆಕ್ಟ್ರಿಕಲ್ಸನ ವಿ. ರಾಮಚಂದ್ರ, ಮಗಳು, ಮಗ ಮತ್ತು ಮುಂದಿನ ಪೀಳಿಗೆಯವರು ತಮ್ಮ ತಮ್ಮ ಜೀವನಗಳಲ್ಲಿ ಅಭಿವೃದ್ಧಿ ಹೊಂದಿ ಅದೇ ರೀತಿಯ ಸಮುದಾಯ ಮತ್ತು ಸಮಾಜದ ಕಾಳಜಿಯನ್ನು ಮುಂದುವರೆಸುತ್ತಿದ್ದಾರೆ.

**ರಾಮಕ್ಕಮ್ಮನವರು ಸ್ವಾತ್ರಂತ್ಯ ಸಂಗ್ರಾಮದಲ್ಲಿಯೂ ಭಾಗವಹಿಸಿದ್ದರು. ಭಾರತ ಸ್ವಾತಂತ್ರ್ಯ ಪಡೆದ 75ನೆ ವರ್ಷದ ಆಚರಣೆಯ ಸಂದರ್ಭದಲ್ಲಿ ನಮ್ಮ ಓದುಗರಿಗೆ ಈ ವಿಷಯವನ್ನು ತಿಳಿಸಲು ಹೆಮ್ಮೆಯೆನಿಸುತ್ತದೆ.** ಸರಳ ಜೀವನಶೈಲಿಗೆ ಕೈಗನ್ನಡಿಯಂತೆ ಬಾಳಿದ ರಾಮಕ್ಕಮ್ಮನವರು ತಮ್ಮ ಜೀವನದುದ್ದಕ್ಕೂ ಕಾಲಿಗೆ ಪಾದರಕ್ಷೆಯಿಲ್ಲದೆ ನಡೆದಾಡುತ್ತಿದ್ದರು.

ಇಂದಿನ ಯುವ ಜನಾಂಗಕ್ಕೆ ಅವರ ಸಮಾಜಮುಖಿ ಕೆಲಸಗಳು, ಜೀವನೋತ್ಸಾಹ, ಚಟುವಟಿಕೆಯ ಜೀವನ, ಕರ್ತವ್ಯ ಪ್ರಜ್ಞೆ, ವಿನಮ್ರತೆಯ ನಡೆ–ನುಡಿ, ಮುಂದಾಳತ್ವ ಇವುಗಳು ಮಾದರಿಯಾಗಬೇಕು. ಈಗಿನ ಕಾಲದಲ್ಲಿರುವಂತೆ ಅನೇಕ ಸೌಲಭ್ಯ, ಸಲಕರಣೆಗಳಿಲ್ಲದ ಕಾಲದಲ್ಲಿ ರಾಮಕ್ಕಮ್ಮನವರು ಇಷ್ಟೆಲ್ಲಾ ಸಾಧನೆಗೈದಿರುವುದು ಅತ್ಯಂತ ಪ್ರಶಂಸನೀಯ ಹಾಗೂ ಮಾರ್ಗದರ್ಶಕ. ಪುರುಷಪ್ರಧಾನ ಸಮಾಜದಲ್ಲಿದ್ದುಕೊಂಡೇ ಇಷ್ಟು ಸಾಧನೆಗೈದ ಇಂತಹ ದೇಶಪ್ರೇಮಿ, ಸಮಾಜಮುಖಿ ವ್ಯಕ್ತಿತ್ವವುಳ್ಳ ಸ್ತ್ರೀಯನ್ನು ಪರಿಚಯಿಸಿದ ಅವರ ಮೊಮ್ಮಗಳಾದ ಶ್ರೀಮತಿ ಗಾಯತ್ರಿ ಪ್ರಭಾಕರ್ (99001 58341) ಮತ್ತು ಅವರ ಪತಿ ಶ್ರೀ ಎನ್.ಪ್ರಭಾಕರ್ ರವರಿಗೆ (9900158341) ಧನ್ಯವಾದಗಳು.

**ಸಂಪಾದಕರು**

ನಮ್ಮವರು

# ನಮ್ಮ ಕುಟುಂಬದ "ಅಜ್ಜಿ", ಲಕ್ಷ್ಮಿದೇವಮ್ಮ ಪುಣ್ಯಸ್ಮರಣೆ

ಲಕ್ಷ್ಮಿದೇವಮ್ಮ (ಅಂದರೆ ನಮ್ಮ ಕುಟುಂಬದವರಿಗೆಲ್ಲ "ಅಜ್ಜಿ") ನನ್ನ ನೆಚ್ಚಿನ ಸೋದರತ್ತೆ. ನಮ್ಮ ಕುಟುಂಬದ ಎಲ್ಲರಿಗೂ ಪ್ರಿಯರಾಗಿದ್ದ ವ್ಯಕ್ತಿ. ಇವರು ದಿ॥ ಸೇತೂರಾಮಯ್ಯ ಮತ್ತು ದಿ॥ ಸುಬ್ಬಮ್ಮನವರ ಪುತ್ರಿ. ಇವರು ತಟ್ಟನಹಳ್ಳಿ ಸುಬ್ಬಮ್ಮನವರ ಪುತ್ರ ಶ್ರೀ ರಾಮರಾವ್ ಅವರನ್ನು ವಿವಾಹವಾದರು. ಸುಬ್ಬಮ್ಮನವರು ನಮ್ಮ ಸಮುದಾಯದಲ್ಲಿ ಹೆಸರುವಾಸಿಯಾಗಿದ್ದವರು. ಅವರು "ನರ್ಸಿಂಗ್" ವೃತ್ತಿಯಲ್ಲಿದ್ದವರು.

ನನಗೆ ಬುದ್ಧಿ ತಿಳಿದಾಗಿನಿಂದ "ಅಜ್ಜಿ" ಅನುಭವಿಸಿದ ಕಷ್ಟಗಳನ್ನೆಲ್ಲಾ ಕಂಡಿದ್ದೇನೆ. ಅವರ ಸಣ್ಣ ವಯಸ್ಸಿನಲ್ಲೇ ಪತಿ ರಾಮರಾವ್ ತೀರಿಕೊಂಡರು. ಆಗ ನಮ್ಮ ಅಜ್ಜಿ ಮೂರು ತಿಂಗಳ ಗರ್ಭಿಣಿ. ಅತ್ತೆ ಸುಬ್ಬಮ್ಮನವರು ತಮ್ಮದೇ ನೋವುಗಳನ್ನೆಲ್ಲಾ ಮರೆತು ಸೊಸೆಗೆ ಬೆಂಬಲವಾಗಿ ನಿಂತರು. ಅವರ ಆರೈಕೆಯಲ್ಲಿ "ಅಜ್ಜಿ" ಗಂಡುಮಗುವಿಗೆ ಜನ್ಮವಿತ್ತರು. ನಂತರ ಅತ್ತೆಯವರ ನೆರವಿನಿಂದ ನರ್ಸಿಂಗ್ ವೃತ್ತಿಯಲ್ಲಿ ತರಬೇತಿ ಪಡೆದು ಸ್ವತಂತ್ರ ಜೀವನ ನಡೆಸಲು ಶಕ್ತರಾದರು. ಸೊಸೆಗೆ ತುಂಬು ಹೃದಯದಿಂದ ಸಹಾಯ ಹಸ್ತ ನೀಡಿದ ಹಿರಿಯ ಚೇತನ ಸುಬ್ಬಮ್ಮನವರ ನೆನಪಿಗೆ ನಮಸ್ಕಾರಗಳು.

ಮುಂದೆ ನಮ್ಮ "ಅಜ್ಜಿ" ಅವರ ಜೀವನದ ಎರಡನೇ ಅಧ್ಯಾಯ ಪ್ರಾರಂಭ. ನಮ್ಮ ಕುಟುಂಬದ ಎಲ್ಲ ಮಕ್ಕಳ ಜನನ ಮನೆಯಲ್ಲಿಯೇ ಅವರ ನೆರವಿನಿಂದಲೇ ಆಗಿದೆ. ಎಲ್ಲರ ಬೆಳವಣಿಗೆಯಲ್ಲೂ ಅವರ ಪಾತ್ರ ಹಿರಿದು. ಹಾಗೆಯೇ ನಮ್ಮ ಸಮುದಾಯದ ಮತ್ತು ಹೊರಗಿನ ಗರ್ಭಿಣಿ ಮಹಿಳೆಯರಿಗೆ ಸುಸೂತ್ರ ಪ್ರಸವವಾಗಲು ಇವರು ನೆರವಾಗಿರುವ ನಿದರ್ಶನಗಳು ಬಹಳಷ್ಟಿವೆ.

ಪರಿವಾರದಲ್ಲಿ ಏನೇ ತೊಂದರೆಗಳಿದ್ದರೂ ಸಮಚಿತ್ತದಿಂದ ಸಂಭಾಳಿಸುತ್ತಿದ್ದರು. ನಮ್ಮ ತಂದೆ ಬಿ.ಎಸ್.ಪಿ. ಅವರಂತೆ "ಅಜ್ಜಿ" ಅವರೂ ಶಿಸ್ತಿನ ಸಿಪಾಯಿ.



ಕಾಲಕ್ರಮೇಣ ಪುತ್ರ ರಾಮಗೋಪಾಲ್ ಬೆಳೆದು ಗೃಹಸ್ಥರಾಗಿ ತಮ್ಮನ್ನು ಉಪಾಧ್ಯಾಯ ವೃತ್ತಿಯಲ್ಲಿ ತೊಡಗಿಸಿಕೊಂಡು ಸಂತೃಪ್ತಿಯಿಂದಿದ್ದರು. ಕೆಲವು ಕಾಲ ನಮ್ಮ "ಅಜ್ಜಿ" ಸಂತಸದಿಂದಿರುವಾಗಲೇ ಮತ್ತೊಂದು ದುರಂತ ಬಂದೆರಗಿತು. ಇದ್ದ ಒಬ್ಬನೇ ಪುತ್ರ ಹಠಾತ್ತಾಗಿ ತಾಯಿ, ಪತ್ನಿ ಮತ್ತು ಎರಡು ಮಕ್ಕಳನ್ನು ಬಿಟ್ಟು ಅಗಲಿದರು. "ಅಜ್ಜಿ" ಆ ಸಂದರ್ಭವನ್ನು ಹೇಗೆ ಎದುರಿಸಿದರು ಎಂದು ಹೇಳಲು ಅಸಾಧ್ಯ. ನಮ್ಮದು ಒಟ್ಟು ಕುಟುಂಬವಾದ್ದರಿಂದ, ಆಕೆಯ ಮನೋಧೈರ್ಯದಿಂದ ಮತ್ತು ಭಗವಂತನ ಅನುಗ್ರಹದಿಂದ ಮಕ್ಕಳು ಬೆಳೆದು ದೊಡ್ಡವರಾದರು.

ಮತ್ತೆ ಕೆಲಕಾಲ "ಅಜ್ಜಿ" ಇದ್ದುದರಲ್ಲಿ ಶಾಂತಿ, ಸಮಾಧಾನದಿಂದಿರುವಾಗಲೇ ಸೊಸೆ ವಿಧಿವಶರಾದರು.

ಪರರ ಏಳಿಗೆಗಾಗಿ ಶ್ರಮಿಸಿ ಜೀವನ ಸಾರ್ಥಕಪಡಿಸಿಕೊಂಡದ್ದಲ್ಲದೇ ವೈಯುಕ್ತಿಕ ಜೀವನದಲ್ಲಿ ಅಪಾರ ನೋವು ಅನುಭವಿಸಿದ ಜೀವ ಹಣ್ಣಾಗಿತ್ತು 28.08.2021 ರಂದು ಅವರ 99 ನೇ ವಯಸ್ಸಿನಲ್ಲಿ ಅವರಿಗೆ ಈ ಜನ್ಮದಿಂದ ಮುಕ್ತಿ ದೊರಕಿತು. ತನ್ನ ಮರಣದ ನಂತರ ತನ್ನ ನೇತ್ರಗಳು ಅನ್ಯರಿಗೆ ಉಪಯೋಗವಾಗಬೇಕೆಂಬ ಅವರ ಅಂತಿಮ ಉದಾತ್ತ ಇಚ್ಛೆಯು ನೆರವೇರಿಸಲ್ಪಟ್ಟಿತು.

"ಅಜ್ಜಿ"! ನಾವುಗಳು ನಿನ್ನಿಂದ ಬಹಳಷ್ಟು ಕಲಿತಿದ್ದೇವೆ. ನಮ್ಮ ಮನದಲ್ಲಿ ನಿನ್ನ ಪುಣ್ಯಸ್ಮರಣೆ ಎಂದೆಂದಿಗೂ ಹಸಿರಾಗಿರುತ್ತದೆ. ನಿನ್ನ ಛಲಕ್ಕೆ, ನಿನ್ನ ಮನೋಸ್ಥೈರ್ಯಕ್ಕೆ ನನ್ನ ಸಲಾಂ.



**ಬಿ.ಪಿ.ಸರಸ್ವತಿ**
**7760634277**

ನಾಟ್ಯಕಲೆ

# ವಿದೂಷಿ ನಾಗಲಕ್ಷ್ಮಿ ನಾಗರಾಜನ್



ಶ್ರೀಮತಿ ನಾಗಲಕ್ಷ್ಮಿರವರು ಬೃಹಚ್ಚರಣದಲ್ಲಿ TVS ಎಂದೇ ಪರಿಚಿತರಾಗಿರುವ ಟಿ.ವಿ.ಶ್ರೀನಿವಾಸನ್ ಹಾಗೂ ಕಮಲ ದಂಪತಿಗಳ ಮಗ ಶ್ರೀ ನಾಗರಾಜನ್‌ರವರ ಪತ್ನಿ. ಇವರು ಕೇರಳಾಪುರದ ಮೀನಾಕ್ಷಿ ಮತ್ತು ಪೂವಗಾಮೆ ಕೃಷ್ಣ ದಂಪತಿಗಳ ಮಗಳು.

ವಿದೂಷಿ ನಾಗಲಕ್ಷ್ಮಿರವರು ಸುಪ್ರಸಿದ್ಧ ಭರತನಾಟ್ಯ ಕಲಾವಿದೆ, ಸಂಯೋಜಕಿ ಹಾಗೂ ಗುರು. ಚಿಕ್ಕ ವಯಸ್ಸಿನಲ್ಲಿ ಬೆಂಗಳೂರಿನ ಶ್ರೀಮತಿ ವಸಂತಲಕ್ಷ್ಮಿರವರ ಬಳಿ ಭರತನಾಟ್ಯ ಕಲಿತರು. ತಮ್ಮ ವಿದ್ವತ್ ಪರೀಕ್ಷೆಯಲ್ಲಿ ಮೊದಲನೆ ದರ್ಜೆಯಲ್ಲಿ ತೇರ್ಗಡೆ ಪಡೆದು, ಬೆಂಗಳೂರಿನಲ್ಲಿ ರಂಗಪ್ರವೇಶ ಮಾಡಿ ಎಲ್ಲರ ಮೆಚ್ಚುಗೆ ಗಳಿಸಿದರು.

ಮೈಸೂರಿನಲ್ಲಿ ನೆಲೆಸಿದ ನಂತರ ಅವರು ವಿದೂಷಿ ಡಾ॥ ವಸುಂಧರಾ ದೊರೆಸ್ವಾಮಿಯವರ ಬಳಿ ತಮ್ಮ ಭರತನಾಟ್ಯ ಹಾಗೂ ಯೋಗ ತರಬೇತಿಯನ್ನು ಮುಂದುವರೆಸಿದರು. ಯೋಗ ಶಿಕ್ಷಣವನ್ನು ಗುರು ಸುದೇಶ್ ಚಂದ್ರರವರ ಬಳಿ ಮುಂದುವರೆಸಿ ಯೋಗ ಶಿಕ್ಷಕಿಯೂ ಆಗಿದ್ದಾರೆ. ಕೇರಳದ ಸಮರ ಕಲೆಯಾದ ಕಲರಿಪಯಟ್ಟುವನ್ನು ಗುರು ಕೃಷ್ಣಪ್ರತಾಪ್ ಅವರಲ್ಲಿ ಕಲಿತಿದ್ದಾರೆ. 2000 ವರ್ಷಕ್ಕೂ ಮೀರಿದ ನಾಟ್ಯಶಾಸ್ತ್ರದ ಕರಣಗಳನ್ನು ಗುರು ಡಾ॥ ಶೋಭಾ ಶಶಿಕುಮಾರ್‌ರವರಲ್ಲಿ ಕಲಿತಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಲಲಿತ ಕಲೆಗಳ ಇಲಾಖೆಯಲ್ಲಿ ಇವರ ಪಿ.ಎಚ್.ಡಿ. ಸಂಶೋಧನೆಯು ಕೊನೆಯ ಹಂತಕ್ಕೆ ತಲುಪಿದೆ.

ವಿದೂಷಿ ನಾಗಲಕ್ಷ್ಮಿಯವರು ಕನ್ನಡ ಹಾಗೂ ಸಂಸ್ಕೃತಿ ವಿಭಾಗ, ಕರ್ನಾಟಕ ರಾಜ್ಯ ಹಾಗೂ ಭಾರತೀಯ ವಿದ್ಯಾ ಭವನ ಆಯೋಜಿಸಿದ್ದ ಬಹುತೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಸಂಗೀತ ನೃತ್ಯ ಅಕಾಡೆಮಿಯ ವಿದ್ಯಾರ್ಥಿ ವೇತನವನ್ನು ಪಡೆದು ಸೌಥ್ ಸೆಂಟ್ರಲ್ ಜ಼ೋನ್ ಕಲ್ಚರಲ್ ಸ್ಪರ್ಧೆಯಲ್ಲಿ ಪ್ರಶಸ್ತಿ ಗಳಿಸಿದ್ದಾರೆ.

ಹಂಪಿ ಉತ್ಸವ, ಲಕ್ಕುಂಡಿ ಉತ್ಸವ, ಕಿಟ್ಟಪ್ಪ ಪಿಳ್ಳೆ ಯುವ ನೃತ್ಯೋತ್ಸವ, ಭರತ ಮುನಿ ಜಯಂತಿ, ವಿಷ್ಣುದಾಸ್ ಸ್ಮಾರಕ ಪ್ರದರ್ಶನ, ಇಸ್ಕಾನ್ ಬ್ರಹ್ಮೋತ್ಸವ, ಫೆಸ್ಟಿವಲ್ ಆಫ್ ನೇಚರ್, ಎರ್ನಾಕುಲಮ್‌ನ ಪ್ರವಾಹ್ ನಾಟ್ಯ ಹಬ್ಬ, ಕೋನರ್ಕ್ ಹಬ್ಬ, ಬೆಂಗಳೂರಿನ ಹಾಗೂ ಸುತ್ತೂರಿನ ನಾಟ್ಯ ಹಬ್ಬ, ಮಂತ್ರಾಲಯ ಹಾಗೂ ಮುಂತಾದವುಗಳಲ್ಲಿ ಏಕವ್ಯಕ್ತಿ ಹಾಗೂ ಸಂಗಡಿಗರೊಂದಿಗೆ ನಾಟ್ಯ ಪ್ರದರ್ಶನ ನೀಡಿದ್ದಾರೆ.

ವಿದೂಷಿ ನಾಗಲಕ್ಷ್ಮಿಯವರು ಮೈಸೂರಿನ ನಾದಬ್ರಹ್ಮ ಸಂಗೀತ ಸಭೆಯಲ್ಲಿ ಸಂಗೀತ ಕಲಾನಿಧಿ ಶ್ರೀ ವಾಸುದೇವಾಚಾರ್ಯರ 150ನೆಯ ಜನ್ಮ ಶತಮಾನೋತ್ಸವದಲ್ಲಿ "ವಾಸುದೇವ ಅಭಿನಂದನಮ್" ಎಂಬ ನಾಟ್ಯ ರೂಪಕವನ್ನು ಪ್ರರ್ಶಿಸಿದ್ದಾರೆ.

ಲಯನ್ಸ್ ಕ್ಲಬ್ ಆಫ್ ಮೈಸೂರ್ ವೆಸ್ಟ್ ಆಯೋಜಿಸಿದ್ದ ನಿಧಿ ಸಂಗ್ರಹಣಾ ಕಾರ್ಯಕ್ರಮದಲ್ಲಿ ಭಾರತರತ್ನ ಶ್ರೀಮತಿ ಎಂ.ಎಸ್.ಸುಬ್ಬಲಕ್ಷ್ಮಿಯವರ ಜನಪ್ರಿಯ ಹಾಡುಗಳಿಗೆ ನೃತ್ಯ ಸಂಯೋಜಿಸಿ ಪ್ರದರ್ಶನ ನೀಡಿದ್ದಾರೆ.

ಡಾ॥ ಸುಕನ್ಯ ಪ್ರಭಾಕರ್ ರವರ "ಕನಕ ಪುರಂದರ ಭಕ್ತಿ ಸುಧ" ಮತ್ತು ಡಾ॥ ಡಿ.ವಿ.ಜಿಯವರ "ಶ್ರೀ ಕೃಷ್ಣ ಲೀಲಾ ವಿಭೂತಿ" ನೃತ್ಯ ರೂಪಕಗಳನ್ನು ಸಂಯೋಜಿಸಿ ಯಶಸ್ವಿಯಾಗಿ ಪ್ರದರ್ಶಿಸಿದ್ದಾರೆ.

ಗುರು ಡಾ॥ ರಾಧಿಕಾ ನಂದಕುಮಾರ್ ಅವರೊಂದಿಗೆ ದೆಹಲಿಯ "ಶಾಸ್ತ್ರ ಉತ್ಸವ್" ದಲ್ಲಿ ಹಾಗೂ ತಿರುಪತಿಯ "ನಾದನೀರಾಜನಂ"ನಲ್ಲಿ ಭಾಗವಹಿಸಿದ್ದಾರೆ. ಅದಲ್ಲದೇ ತಮ್ಮ ಗುರುಗಳ ಸೂರ್ಯ ನಮಸ್ಕಾರ, ಚಾಲುಕ್ಯ ವೈಭವ, ವಿದ್ಯುನ್ಮದನಿಕ, ಶ್ರೀ ಕೃಷ್ಣ ತುಲಾಭಾರ, ಗುರುಭ್ಯೋ ನಮಃ, ರಾಮಾಯಣ, ಕಾವೇರಿ ವೈಭವ ಮತ್ತು ಶಾಕುಂತಲ ಮುಂತಾದ ರೂಪಕಗಳಲ್ಲಿ ಭಾಗವಹಿಸಿ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ನಾಗಲಕ್ಷ್ಮಿಯವರು ವೃತ್ತಿಯಲ್ಲಿ ಸಿವಿಲ್ ಇಂಜಿನೀಯರ್ ಆಗಿದ್ದು ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಮೈಸೂರಿನಲ್ಲಿ ನೆಲೆಸಿದ ನಂತರ ತಮ್ಮದೇ ಆದ "ಚಂಪಕ ಅಕಾಡೆಮಿ"ಯನ್ನು ಸ್ಥಾಪಿಸಿ ಬೆಳೆಸಿದ್ದಾರೆ. ಅದರ ಮೂಲಕ ಮಕ್ಕಳಿಗೆ ಮ್ಯಾಂಟೆಸ್ಸೊರಿ ಶಿಕ್ಷಣದ ಜೊತೆಗೆ ಕಲೆ ಹಾಗೂ ಸಂಸ್ಕೃತಿಯ ಸದಭಿರುಚಿಯನ್ನು ತುಂಬುತ್ತಿದ್ದಾರೆ. ಈ ಅಕಾಡೆಮಿಯ ಚಟುವಟಿಕಾ ಕೇಂದ್ರದಲ್ಲಿ ಯೋಗಾಭ್ಯಾಸ ಸಂಘಟಿತ ಭರತನಾಟ್ಯ ಕಲಿಕೆಯನ್ನು ನೀಡುತ್ತಿದ್ದಾರೆ. ಇವರು ಭರತನಾಟ್ಯದ ಪರೀಕ್ಷೆಗಳಲ್ಲಿ ಪರೀಕ್ಷಕರಾಗಿ ಕಾರ್ಯ ನಿರ್ವಹಿಸಿದ್ದಾರೆ ಹಾಗೂ ಇವರ ಶಿಷ್ಯಂದಿರು ಪರೀಕ್ಷೆಯಲ್ಲಿ ಪ್ರತಿ ವರ್ಷ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಸದ್ಯ ಇವರು "ಸಂಸ್ಕಾರ ಭಾರತಿ" ಮೈಸೂರು ವಿಭಾಗದ ಉಪಾಧ್ಯಕ್ಷರಾಗಿದ್ದಾರೆ.

ಸಂಘವು ಶ್ರೀಮತಿ ನಾಗಲಕ್ಷ್ಮಿ ಅವರಿಗೆ ಅವರ ಎಲ್ಲ ಕಾರ್ಯ ಚಟುವಟಿಕೆಗಳಲ್ಲಿ ಯಶಸ್ಸನ್ನು ಹಾರೈಸುತ್ತದೆ.

ಕರಕುಶಲ

# ಸೃಜನಾತ್ಮಕ ಕಲಾವಿದೆ ವೀಣಾ ವಿಶ್ವನಾಥ್



ಶ್ರೀಮತಿ ವೀಣಾ ವಿಶ್ವನಾಥ್ ರವರು ಸಂಘದ ಹಿರಿಯ ಸದಸ್ಯ ಶ್ರೀ ಕೆ.ಹನುಮಂತನ್ ಮತ್ತು ಶ್ರೀಮತಿ ದ್ವಾರಕೀರವರ ಮಗಳು ಹಾಗೂ ಸದಸ್ಯ ಶ್ರೀ ಎಸ್.ವಿಶ್ವನಾಥ್‌ರವರ ಪತ್ನಿ.

ಪದವೀಧರೆಯಾದ ಶ್ರೀಮತಿ ವೀಣಾರವರಿಗೆ ಚಿಕ್ಕಂದಿನಿಂದಲೂ ಕರಕುಶಲ ಕಲೆಯ ಬಗ್ಗೆ ಆಸಕ್ತಿಯಿತ್ತು. ಅವರಲ್ಲಿ ಅವ್ಯಕ್ತವಾಗಿದ್ದ ಈ ಕಲೆಯು ಸ್ನೇಹಿತೆಯ ಸಹಾಯ ಮತ್ತು ಉತ್ತೇಜನದಿಂದ ವ್ಯಕ್ತವಾಯಿತು.

ಈ ಹವ್ಯಾಸಿ ಕಲಾವಿದೆಯ ಕಲಾಪ್ರಕಾರಗಳೆಂದರೆ ಮಣಿತೋರಣ, ಮೈಕ್ರೇನ್ ವೈರ್ ಬಳಸಿ ಅಲಂಕೃತ ಸಾಮಗ್ರಿಗಳು, ಆಂಕರ್ ದಾರ ಬಳಸಿ ಕಲಾಚಿತ್ರ, ನಿಟ್ಟಿಂಗ್ ಮತ್ತು ಕ್ರೋಶಾ ಬಳಸಿ ವುಲ್ಲನ್ ಸ್ವೆಟರ್ ಮತ್ತು ಶಾಲು. ಹಾಕುವುದಲ್ಲದೆ ಇನ್ನೂ ಹಲವಾರು ಕೈಕೆಲಸಗಳು ಇವರಿಗೆ ಕರಗತ. ಇದನ್ನು ಹೀಗೆ ಮುಂದುವರಿಸಿ ಇತರ ಆಸಕ್ತರಿಗೂ ಹೇಳಿಕೊಡಬೇಕೆಂಬುದು ಇವರ ಆಶಯ. ಇವರು ತಾವೇ ತಯಾರಿಸಿರುವ ಕಲಾ ಕೃತಿಗಳಿಂದ ತಮ್ಮ ಮನೆಯನ್ನು ಅಲಂಕರಿಸಿದ್ದಾರೆ. ಇದಲ್ಲದೆ ಪುಸ್ತಕ ಓದುವಿಕೆ ಇವರ ಹವ್ಯಾಸ.

ಶ್ರೀಮತಿ ವೀಣಾರವರ ಬೊಂಬೆಗಳ ಸಂಗ್ರಹ ಮತ್ತು ದಸರಾ ಹಬ್ಬದ ಸಮಯದಲ್ಲಿ ಅವುಗಳ ಜೋಡಣೆ ಮತ್ತು ಪ್ರದರ್ಶನ ಆಶ್ಚರ್ಯ ತರುವಂತಿರುತ್ತದೆ. ಇವುಗಳಿಗೆಲ್ಲಾ ಮನೆಯವರ ಪ್ರೋತ್ಸಾಹ ಅತ್ಯಗತ್ಯ. ಇವರ ಪತಿ ಶ್ರೀ ವಿಶ್ವನಾಥ್‌ರವರ ಸಹಕಾರ ಮತ್ತು ಮಗಳಾದ ಕುಮಾರಿ ವೈಷ್ಣವಿ ವಿಶ್ವನಾಥ್‌ರವರ ಆಸಕ್ತಿ ಈ ಎಲ್ಲಾ ಕಲೆಯನ್ನು ಬೆಳೆಸಿಕೊಂಡು ಬರುವುದಕ್ಕೆ ಪೂರಕವಾಗಿದೆ. ಶ್ರೀಮತಿ ವೀಣಾರವರ ಅತ್ತೆಯವರಾದ ದಿವಂಗತ ಶ್ರೀಮತಿಯವರೂ ಹಲವಾರು ಕರಕುಶಲ ವಸ್ತುಗಳನ್ನು ತಯಾರಿಸುತ್ತಿದ್ದರು. (ಶ್ರೀಮತಿಯವರು ಬೃಹಚ್ಚರಣ ಸಂಘದ ಮೊದಲಿನ ಕಾರ್ಯಕಾರಿ ಸಮಿತಿಯಲ್ಲಿದ್ದ ಲಕ್ಷ್ಮಣ ಅಯ್ಯರ್ ಅವರ ಪುತ್ರ ಸುಬ್ರಹ್ಮಣ್ಯರವರ ಪತ್ನಿ). ಇದು ಪರಂಪರಾಗತವಾಗಿ ಮುಂದುವರೆಯುತ್ತಿರುವುದರ ಸಾಕ್ಷಿಯಾಗಿ ಮೊಮ್ಮಗಳಾದ ಕುಮಾರಿ ವೈಷ್ಣವಿ ತಾಯಿಯಂತೆಯೇ ಕೆಲವು ಕಲಾಕೃತಿಗಳನ್ನು ಕಲಿತು ಮನೆಯಲ್ಲಿ ಪ್ರದರ್ಶಿಸಿದ್ದಾರೆ. ಈಕೆ ಭರತನಾಟ್ಯ ಕಲಾವಿದೆಯೂ ಕೂಡ.

ಯಾವುದೇ ಒಂದು ಕಲೆ, ಪ್ರತಿಭೆ, ಸಾಮರ್ಥ್ಯ ಹೊರಹೊಮ್ಮಬೇಕಾದರೆ ಅದಕ್ಕೆ ತಕ್ಕುದಾದ ವಾತಾವರಣ ಮತ್ತು ಆತ್ಮೀಯರ ಸಾಂದರ್ಭಿಕ ಪ್ರೋತ್ಸಾಹ ಅತ್ಯಗತ್ಯ. ವೀಣಾರವರ ಪತಿಯು ಹೇಗೆ ಇವರ ಆಸಕ್ತಿಯನ್ನು ಗೌರವಿಸಿ ಬೆಂಬಲ ನೀಡುತ್ತಿದ್ದಾರೋ ಹಾಗೆ ವೀಣಾರವರು ಕೂಡಾ ತಮ್ಮ ಪತಿಯ ಆಸಕ್ತಿಯಾದ ತೋಟಗಾರಿಕೆಗೆ ಮಹತ್ವ ನೀಡುತ್ತಿದ್ದಾರೆ. ಮನೆಯ ತಾರಸಿಯ ಮೇಲೆ ಒಂದು ಪುಟ್ಟ ಕೈತೋಟವನ್ನು ಬೆಳೆಸಿದ್ದಾರೆ. ಇಲ್ಲಿ ಬೆಳೆಸಲ್ಪಟ್ಟಿರುವ ಔಷಧೀಯ ಸಸ್ಯಗಳು, ಹೂವಿನ ಗಿಡಗಳು ನೋಡಲು ಮನೋಹರವಾಗಿವೆ.

ಬೆಂಗಳೂರಿನ ಮಲ್ಲೇಶ್ವರದಲ್ಲಿ ವಾಸವಾಗಿರುವ ಈ ಕಲಾವಿದೆಯನ್ನು ಪರಿಚಯಿಸಲು ಬೃಹಚ್ಚರಣ ಸಂಘಕ್ಕೆ ಸಂತಸವಾಗುತ್ತದೆ.

**ಲಲಿತಾ ರಮೇಶ್**
**9945199637**

# ಸಂಘದ ಹಿತೈಷಿಗಳು

- ಶ್ರೀಮತಿ ವೈಜಯಂತಿಯವರು ಬೃಹಚ್ಚರಣ ಸಂಘದ ಕಾರ್ಯಚಟುವಟಿಗೆಗಳನ್ನು ಗಮನಿಸಿ ಸಂಘದ ಏಳಿಗೆಗಾಗಿ ಸೇವೆ ಸಲ್ಲಿಸುತ್ತಿರುವ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಅಭಿನಂದಿಸಿರುತ್ತಾರೆ. ಸಂಘದ ಕಾರ್ಯಕ್ರಮಗಳಿಗೆ ಅವ್ಯಾಹತವಾಗಿ ದೇಣಿಗೆ ನೀಡುತ್ತಿದ್ದಾರೆ.
- ಶ್ರೀಮತಿ ಲಲಿತಮ್ಮ ಚಂದ್ರಶೇಖರ್ (90 ವರ್ಷ, ಕನ್ನಡದ ಮಹಿಳಾ ಸಾಹಿತಿ) ನಮ್ಮ ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಕೇಳಿ, ಅರಿತುಕೊಂಡು, ಮೆಚ್ಚುಗೆ ವ್ಯಕ್ತಪಡಿಸಿರುವರು. ಅಲ್ಲದೇ ಕಿತ್ತಿಗಾನಹಳ್ಳಿಯ ಶ್ರೀ ನಾಗೇಶ್ವರ ಕ್ಷೇತ್ರದಲ್ಲಿ ಪ್ರತಿ ವರ್ಷ ನಡೆಯುವ ನಾಗಾರಾಧನೆಗೆಂದು ದೇಣಿಗೆ ನೀಡಿರುವರು.

ಸಂಘವು ಈ ಇಬ್ಬರು ಹಿರಿಯರಿಗೆ ಧನ್ಯವಾದಗಳನ್ನು ಸಲ್ಲಿಸುತ್ತದೆ.

ಜ್ಯೋತಿರ್ಲಿಂಗದರ್ಶನ-2

## ಶ್ರೀಶೈಲದ ಮಲ್ಲಿಕಾರ್ಜುನ

**ಎಲ್ಲಿದೆ? :** ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯಲ್ಲಿದೆ. ಕೃಷ್ಣಾ ನದಿ ತೀರದಲ್ಲಿರುವ ಇದು ಕದಲಿ, ಬಿಲ್ವವೃಕ್ಷಗಳಿಂದ ಕೂಡಿದ ಮನೋಹರವಾದ ಪರ್ವತಶ್ರೇಣಿಯಲ್ಲಿದೆ. ಪುರಾಣ ಕಾಲದಲ್ಲಿ ಶಿವ-ಪಾರ್ವತಿಯರು ತಮ್ಮ ಪುತ್ರನಾದ ಕುಮಾರಸ್ವಾಮಿಯನ್ನು ಅರಸುತ್ತಾ ಇಲ್ಲಿಗೆ ಬಂದರು ಎಂದು ಪ್ರತೀತಿ. ಒಂದು ಐತಿಹ್ಯದಂತೆ ಶಿವನ ಮಕ್ಕಳು ಕೈಲಾಸ ಪರ್ವತವನ್ನು ತೊರೆದು ಶ್ರೀಶೈಲದಲ್ಲಿ ವಿಹರಿಸುತ್ತಿರಲು, ಬಹುದಿನಗಳ ನಂತರ ಮಕ್ಕಳನ್ನು ನೋಡುವಾಸೆಯಿಂದ ಕೈಲಾಸಪತಿಯು ಪತ್ನಿ ಸಮೇತ ಇಲ್ಲೇ ಬಂದು ನೆಲೆ ನಿಂತನು.

ಆದಿ ದಂಪತಿಗಳ ಸೇವೆಗಾಗಿ ಇಂದ್ರಾದಿಗಳು ಶ್ರೀಶೈಲಕ್ಕೆ ಬಂದರು. ಕೆಲಕಾಲದ ನಂತರ ಶಿವನು ತನ್ನ ಪರಿವಾರದೊಡನೆ ಮೂಲಸ್ಥಾನಕ್ಕೆ ಹೊರಡಲನುವಾದಾಗ ಸ್ವಾಮಿಯು ಇಲ್ಲೇ ನೆಲೆಸಬೇಕೆಂದು ಭಕ್ತರು ಕೋರಿದರು.

ಶಿವ-ಪಾರ್ವತಿಯರು ಮಲ್ಲಿಕಾರ್ಜುನ ಭ್ರಮರಾಂಬೆಯ ರೂಪದಲ್ಲಿ ಇಲ್ಲಿ ಜ್ಯೋತಿರ್ಮಯರಾಗಿ ನಿಂತರಂತೆ. ಈಗಲೂ ಪ್ರತಿ ಹುಣ್ಣಿಮೆ ಮತ್ತು ಅಮಾವಾಸ್ಯೆಗಳಂದು ಶಿವ-ಪಾರ್ವತಿಯರು ಇಲ್ಲಿಗೆ ಭೇಟಿ ನೀಡುತ್ತಾರೆಂಬುದು ಸ್ಥಳೀಯರ ನಂಬಿಕೆ. ಪ್ರಖ್ಯಾತ ವಚನಕಾರ್ತಿ ಅಕ್ಕಮಹಾದೇವಿ ಇಲ್ಲಿಯೇ ಮಲ್ಲಿಕಾರ್ಜುನನ ದರ್ಶನ ಪಡೆದು ಶಿವೈಕ್ಯರಾದರೆಂದು ನಂಬಿಕೆ. ವಿಜಯನಗರ ಅರಸರ ಕಾಲದಲ್ಲಿ ಈ ದೇವಸ್ಥಾನ ಸಾಕಷ್ಟು ಅಭಿವೃದ್ಧಿ ಹೊಂದಿತು. ಛತ್ರಪತಿ ಶಿವಾಜಿ ಈ ದೇವಾಲಯದ ಪುನರುತ್ಥಾನವನ್ನು ಕೈಗೊಂಡನಂತೆ.

**ದೇವಸ್ಥಾನದ ಸ್ವರೂಪ :** ಮಲ್ಲಿಕಾರ್ಜುನನ ದೇವಸ್ಥಾನವು 1572 ಅಡಿಗಳಷ್ಟು ಎತ್ತರದ ಬೆಟ್ಟದ ಮೇಲಿದೆ. ದೇಗುಲದ ವಿಸ್ತೀರಣ 300000 ಚ. ಅಡಿ. ಸಂಪೂರ್ಣ ಶಿಲಾನಿರ್ಮಿತವಾದ ಈ ದೇವಸ್ಥಾನದ ಮುಖಮಂಟಪ ಮತ್ತು ನಂದಿ ವಿಗ್ರಹಗಳು ಅತಿ ಸುಂದರವಾಗಿವೆ. ಇಲ್ಲಿನ ದೇವಿ ಭ್ರಮರಾಂಬಾಳನ್ನು ಮಾಧವಿ ಎಂದೂ ಕರೆಯುತ್ತಾರೆ. ಇದನ್ನು ಶಕ್ತಿಸ್ಥಳವೆಂದೂ ಕರೆಯಲಾಗುತ್ತದೆ.

ಪಾತಾಳ ಗಂಗೆಯಿಂದ (ಕೃಷ್ಣಾ ನದಿ ದಡದಲ್ಲಿರುವ ಕ್ಷೇತ್ರ) ತೀರ್ಥವನ್ನು ಒಯ್ದು 852 ಮೆಟ್ಟಿಲುಗಳನ್ನು ಹತ್ತಿ ಭಕ್ತಾದಿಗಳು ಅಭಿಷೇಕ ಮಾಡುತ್ತಾರೆ. ಹತ್ತಿರದಲ್ಲಿರುವ ಸಾಕ್ಷಿ ಗಣಪತಿ (22 ಕಿ. ಮೀ.) ಪ್ರಮುಖ ಕ್ಷೇತ್ರ.

**ಭೇಟಿ ನೀಡುವ ಸಮಯ :** ಶಿವರಾತ್ರಿಗೆ ಮುನ್ನ ಮಾಘ ಮಾಸ ಕಳೆದ ನಂತರ ಈ ಯಾತ್ರೆ ಕೈಗೊಳ್ಳಬೇಕು. ಮಹಾಶಿವರಾತ್ರಿ, ಮಕರ ಸಂಕ್ರಾಂತಿ, ಚಾಂದ್ರಮಾನ ಯುಗಾದಿಗಳು ಇಲ್ಲಿ ಪ್ರಮುಖ ಉತ್ಸವದ ದಿನಗಳು. ಇದಲ್ಲದೇ ಪ್ರತೀ ಪಕ್ಷದ ಚತುರ್ದಶಿಯ ಪ್ರದೋಷಕಾಲಕ್ಕೆ ಇಲ್ಲಿ ವಿಶೇಷ ಪೂಜೆ ಇರುತ್ತದೆ.

**ಹೇಗೆ ಹೋಗುವುದು? :** ಆತ್ಮಕೂರಿನಿಂದ ದ್ರೋಣಾಚಲಂ ಮಾರ್ಗವಾಗಿ 75 ಕಿ.ಮೀ. ಬರಿಗಾಲಿನಲ್ಲಿ ಕ್ರಮಿಸುವುದು ಶಿವ ಭಕ್ತರಿಗೆ ಪವಿತ್ರವಾದದ್ದು.

**ವಸತಿ :** ಕರ್ನಾಟಕ ಭವನ, ಶಂಕರಮಠದ ಅತಿಥಿ ಗೃಹಗಳಿವೆ. ಆಂಧ್ರ ಪ್ರದೇಶ ಸರ್ಕಾರದ ಶೈಲಾ ವಿಹಾರ ಅತಿಥಿ ಗೃಹಗಳಿವೆ. ಇದಲ್ಲದೇ ಖಾಸಗಿ ಅತಿಥಿ ಗೃಹಗಳೂ ಇವೆ.



◆ಅನಿಲ್ ರಮೇಶ್
9980027189

## ಭಾವದೊಂದಿಗೆ ಹಾಡಿರಿ - ಉಪಯೋಗ ಪಡೆಯಿರಿ

ಮೆದುಳಿನ ಬಲಭಾಗವನ್ನು ಸಂಶೋಧಕರು ಭಾವನೆಗಳ ಸೃಜನಶೀಲತೆಯ ಸ್ಥಳವೆಂದು, ಮೆದುಳಿನ ಎಡಭಾಗವನ್ನು ಮಾನವನ ಬುದ್ಧಿಶಕ್ತಿಯ ಸ್ಥಳವೆಂದು ವಿಜ್ಞಾನಿಗಳು ಕಂಡುಕೊಂಡಿದ್ದಾರೆ. ವಿಜ್ಞಾನ ಹಾಗೂ ವೈಜ್ಞಾನಿಕ ಮನೋಭಾವದಿಂದಾಗಿ ಎಡ ಮೆದುಳು ಸಾಕಷ್ಟು ಬೆಳವಣಿಗೆಯನ್ನು ಹೊಂದಿದೆ. ಆದರೆ ಬಲ ಮೆದುಳನ್ನು ಸಂಪೂರ್ಣ ಕಡೆಗಣಿಸಲಾಗಿದೆ. ಸಮತೋಲನ ಇಲ್ಲದ ಈ ಬೆಳವಣಿಗೆಯು ಆಧುನಿಕ ಯುಗದಲ್ಲಿ ಕಾಯಿಲೆಗಳಿಗೆ ಮೂಲ ಕಾರಣವಾಗಿದೆ.

ಬಲ ಮೆದುಳನ್ನು ಸಜ್ಜುಗೊಳಿಸುವುದು ಹೇಗೆ?

ಬಲಮೆದುಳನ್ನು ತರಬೇತಿಗೊಳಿಸುವುದರಲ್ಲಿ ಕೇವಲ ಪದಗಳಿಂದ ಭಾವ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಆದ್ದರಿಂದಲೇ ಸ್ತೋತ್ರಗಳು ಯಾವುದೇ ಭಾಷೆಯಲ್ಲಿ ಇರಲಿ ಸರ್ವರನ್ನು ಆಕರ್ಷಿಸುತ್ತದೆ. ಅಲ್ಲಿ ಪ್ರತಿಯೊಂದು ಶಬ್ದದಲ್ಲಿ, ಸಾಲಿನಲ್ಲಿ ದಿವ್ಯ ಛಂದಸ್ಸಿದೆ, ಸ್ವರ ಮೇಳವಿದೆ ಹಾಗೂ ಇಂಪಿದೆ. ಇವುಗಳನ್ನು "ಪ್ರೇಮ ಮತ್ತು ಭಕ್ತಿಯ"ದಿವ್ಯ ರಾಗದಲ್ಲಿ ಹಾಡಿದರೆ ಯಾರೇ ಆಗಲಿ ಆನಂದದ ಉತ್ತುಂಗ ಶಿಖರವನ್ನು ಏರಬಹುದು.

ಗುಂಪಿನೊಡನೆ ದನಿ ಸೇರಿಸಿ ಹಾಡಿದಾಗ ನಮ್ಮ ಭಾವನೆಗಳು ಪರಿಶುದ್ಧಗೊಳ್ಳುತ್ತದೆ. ಗುಂಪಿನೊಡನೆ ತಾರಕಸ್ವರದಲ್ಲಿ ಹಾಡಿರಿ, ಪ್ರತಿಯೊಂದು ಸ್ವರದೊಡನೆ ತೇಲಾಡಿರಿ. ಹೃದಯವು ಕರಗಲಿ, ಕಣ್ಣೀರಧಾರೆ ಹರಿಯಲಿ, ನಿಮ್ಮ ಭಾವನೆಗಳು ತಡೆಯಿಲ್ಲದೆ ಹರಿಯಲಿ, ಆಗ ತಲೆ ಹಗುರಾಗುತ್ತದೆ. ಹೃದಯ ಹಗುರವಾಗುತ್ತದೆ. ಅಕಾರಣ ದುಃಖವು ಸಂತೋಷವಾಗಿ ಮಾರ್ಪಾಡಾಗುತ್ತದೆ. ಜೀವನದಲ್ಲಿ ಎಲ್ಲಾ ಸಮಸ್ಯೆಗಳು ಪರಿಹಾರವಾಗಿ ಪ್ರಪಂಚದಲ್ಲಿ ಜೀವಿಸಲು ಯೋಗ್ಯವಾಗುತ್ತದೆ. ಈ ಸಂತೋಷದ ಸಂಜೀವಿನಿಯನ್ನು ಭಾವನೆಗಳ ಸಂಸ್ಕಾರದೊಂದಿಗೆ ಇತರರೊಡನೆ ಹಂಚಿಕೊಳ್ಳಿ. ಮನಸ್ಸನ್ನು ಉಲ್ಲಾಸದಿಂದ ಇಟ್ಟುಕೊಳ್ಳಿ.

**ಸಂಧ್ಯಾ ನಾಗರಾಜ್**

# ನಾಗಾರಾಧನೆ – 2022

ಆನೇಕಲ್ ತಾಲ್ಲೂಕಿನ ಕಿತ್ತಿಗಾನಹಳ್ಳಿಯಲ್ಲಿನ ಶ್ರೀ ನಾಗೇಶ್ವರ ಕ್ಷೇತ್ರದಲ್ಲಿ ದಿ. 7.3.2022 ಸೋಮವಾರದಂದು (ಫಾಲ್ಗುಣ ಶುದ್ಧ ಪಂಚಮಿ) ನಾಗಾರಾಧನೆಯು ತಲೆತಲಾಂತರದಿಂದ ನಡೆದುಕೊಂಡು ಬಂದಂತೆ ಸಾಂಪ್ರದಾಯಿಕ ರೀತಿಯಲ್ಲಿ ಜರುಗಿತು. ನೂರಾರು ಭಕ್ತಜನರಿಂದ ಈ ಕ್ಷೇತ್ರದ ಅಶ್ವತ್ಥವೃಕ್ಷದ ಕಟ್ಟೆಯಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ನಾಗ ಶಿಲೆಗಳಿಗೆ ಬೃಹಚ್ಚರಣ ಸಮುದಾಯದವರಿಂದ ತನಿ ಎರೆಯುವ ಪೂಜಾ ವಿಧಾನ ಬೆಳಿಗ್ಗೆ 8ಕ್ಕೆ ಆರಂಭವಾಯಿತು. ನಂತರ ಬ್ರಹ್ಮಚಾರಿಗಳು ಸುಬ್ರಹ್ಮಣ್ಯಸ್ವಾಮಿ ಸ್ವರೂಪ ಎಂಬ ಪುನೀತ ಭಾವದಿಂದ ಭಕ್ತಾದಿಗಳು ಅವರ ಪಾದ ಪೂಜೆ ಮಾಡಿ ವಸ್ತ್ರ ಮತ್ತು ದಕ್ಷಿಣೆ ಸಹಿತ ತಾಂಬೂಲ ನೀಡಿ ನಮಸ್ಕರಿಸಿದರು.

ಶ್ರೀ ಕ್ಷೇತ್ರ ದೇವತೆಗಳಾದ ಭೂ–ನೀಳಾ ಸಮೇತ ಶ್ರೀನಿವಾಸ ದೇವರಿಗೆ ಹಾಗೂ ಶ್ರೀವಳ್ಳಿ–ದೇವಸೇನಾ ಸಮೇತ ಶ್ರೀ ಸುಬ್ರಹ್ಮಣ್ಯಸ್ವಾಮಿಗೆ ವಿಶೇಷ ಪೂಜೆಗಳನ್ನು ನಡೆಸಲಾಯಿತು. ಪುಷ್ಪಾಲಂಕೃತಗೊಂಡ ಉತ್ಸವ ಮೂರ್ತಿಗಳನ್ನು ವಾದ್ಯಮೇಳದೊಂದಿಗೆ ಮೆರವಣಿಗೆಯಲ್ಲಿ ತಂದು ಅಶ್ವತ್ಥಕಟ್ಟೆಯಲ್ಲಿ ಪೂಜೆಗಾಗಿ ಇರಿಸಲಾಯಿತು. ನಂತರ ದೇವಸ್ಥಾನದ ಅರ್ಚಕರು ಅನ್ನಸಂತರ್ಪಣೆಗೆ ಹಾಗೂ ನಾಗಾರಾಧನೆಗೆ ದೇಣಿಗೆ ನೀಡಿದವರ ಹೆಸರಿನಲ್ಲಿ ಸಂಕಲ್ಪ ಮಾಡಿ ಪೂಜೆ, ನೈವೇದ್ಯ ಮತ್ತು ಮಹಾಮಂಗಳಾರತಿ ನೆರವೇರಿಸಿದರು. ಕ್ಷೇತ್ರ ನಿವಾಸಿಗಳಾದ ಶ್ರೀಮತಿ ಭಾರತಿ ಮತ್ತು ಶ್ರೀ ಅನಂತಶೇಷರವರು ದೇವರನಾಮ ಮತ್ತು ಭಜನಾ ಸೇವೆಯ ಮೂಲಕ ಭಕ್ತಾದಿಗಳ ಹೃನ್ಮನ ತಣಿಸಿದರು.

ಈ ವರ್ಷವೂ ಸಮುದಾಯದ ರಾಜಾಪುರ ಕುಟುಂಬದವರು ಪಾನಕ, ಕೋಸಂಬರಿ ಮತ್ತು ಹುಳಿಯವಲಕ್ಕಿ ಪ್ರಸಾದವನ್ನು ಆಯೋಜಿಸಿ ಪಾರಂಪರ್ಯವಾಗಿ ನಡೆಸಿಕೊಂಡು ಬಂದ ಸಂಪ್ರದಾಯವನ್ನು ಬಿಡದೆ ಅನುಸರಿಸಿ ಭಗವತ್ ಕೃಪೆಗೆ ಪಾತ್ರರಾದರು.

ಮಧ್ಯಾಹ್ನ ಎರಡು ಘಂಟೆಗೆ ಪ್ರಸಾದ ಭೋಜನ ಪ್ರಾರಂಭವಾಯಿತು. ಹಲವಾರು ದಶಕಗಳಿಂದ ನಡೆದು ಬಂದಂತೆ, ಕ್ಷೇತ್ರಕ್ಕೆ ಆಗಮಿಸಿದ ಸಮಸ್ತರಿಗೂ ಸಹಪಂಕ್ತಿ ಭೋಜನವಾಯಿತು. ಇದೇ ಸಮಯದಲ್ಲಿ ಶ್ರೀಮತಿ ಅನಿತಾ ಮತ್ತು ಶ್ರೀ ಡಿ.ಆರ್. ಕೃಷ್ಣಮೂರ್ತಿ ದಂಪತಿಗಳು ಭಗವಂತನಲ್ಲಿ ನಿವೇದಿಸಿಕೊಂಡಿದ್ದ ತಮ್ಮ ಮನೋಭೀಷ್ಟವು ನೆರವೇರಿದ ಪ್ರಯುಕ್ತ ಎಲ್ಲ ಭಕ್ತಾದಿಗಳಿಗೂ ಲಾಡು ಪ್ರಸಾದವನ್ನು ಪ್ರಾಯೋಜಿಸಿದ್ದರು. ಅಲ್ಲದೇ ಇವರು ನಾಗಾರಾಧನೆಗಾಗಿ ಉದಾರ ನೆರವು ನೀಡಿರುತ್ತಾರೆ.



ಸಂಘದ ಸದಸ್ಯರಾದ ಶ್ರೀ ಡಿ. ಸತ್ಯಮೂರ್ತಿ ಅವರು 80 ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ಒಬ್ಬಟ್ಟನ್ನು ಪ್ರಾಯೋಜಿಸಿ ವಿತರಿಸಿದರು.

ಬೃಹಚ್ಚರಣ ಸಂಘದ ಕಾರ್ಯಕಾರಿ ಸಮಿತಿಯು ಶ್ರೀಮತಿ ಅನಿತಾ ಮತ್ತು ಶ್ರೀ ಡಿ.ಆರ್. ಕೃಷ್ಣಮೂರ್ತಿ ದಂಪತಿಗಳನ್ನು ಹಾಗೂ ಶ್ರೀ ಸತ್ಯಮೂರ್ತಿ ಮತ್ತು ಅವರ ಪರಿವಾರವರ್ಗಕ್ಕೆ ಭಗವಂತನ ಅನುಗ್ರಹ ಉಂಟಾಗಲೆಂದು ಹಾರೈಸುತ್ತದೆ.

ಸುಮಾರು 450 ಜನ ಈ ಕ್ಷೇತ್ರಕ್ಕೆ ಆಗಮಿಸಿ ಪ್ರಸಾದ ಭೋಜನವನ್ನು ಸ್ವೀಕರಿಸಿ ಸಂಘದ ಶ್ರಮವನ್ನು ಸಾರ್ಥಕಗೊಳಿಸಿದರು. ಶುಚಿ–ರುಚಿಯಾದ ಪ್ರಸಾದ ಭೋಜನ ತಯಾರಿಸಿದ ಬಾಣಸಿಗ ಮಹಾಶಯರಿಗೆ ಈ ವರ್ಷವೂ ಕಾರ್ಯಕಾರಿ ಸಮಿತಿಯ ಸದಸ್ಯರು ಸ್ವಇಚ್ಛೆಯಿಂದ ಪಂಚೆ ಮತ್ತು ಶಲ್ಯಗಳನ್ನು ಪ್ರಾಯೋಜಿಸುವುದನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಶುಭಕೃತ್ ಸಂವತ್ಸರದ ಪಂಚಾಂಗವನ್ನು ಸಮುದಾಯದವರಿಗೋಸ್ಕರ ರಿಯಾಯಿತಿ ದರದಲ್ಲಿ ಮಾರಾಟಕ್ಕೆ ಇಡಲಾಗಿತ್ತು. ಬಹುತೇಕ ಪಂಚಾಂಗಗಳು ಮಾರಾಟವಾದವು.

ಪ್ರತಿ ವರ್ಷವೂ ನಾಗಾರಾಧನೆಯು ಯಾವುದೇ ಅಡೆತಡೆಯಿಲ್ಲದೆ ಸುಸೂತ್ರವಾಗಿ ನೆರವೇರಲು ಭಗವಂತನ ಅನುಗ್ರಹದೊಂದಿಗೆ ಕಿತ್ತಿಗಾನಹಳ್ಳಿಯ ನಿವಾಸಿಗಳಾದ ಸಂಘದ ಖಜಾಂಚಿಗಳಾದ ಶ್ರೀ ಎಸ್.ಸತ್ಯನಾರಾಯಣ ಮತ್ತು ಸಂಘದ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ವಿ.ಎಸ್.ಮಣಿಯವರು ಪೂರ್ಣ ಜವಾಬ್ದಾರಿ ಹೊತ್ತು ಕಾರ್ಯ ನಿರ್ವಹಿಸುತ್ತಿರುವುದು ಬೆಂಗಳೂರಿನಲ್ಲಿ ನೆಲೆಸಿರುವ ಸಂಘದ ಇನ್ನಿತರ ಕಾರ್ಯಕಾರಿ ಸಮಿತಿ ಸದಸ್ಯರು ನಾಗಾರಾಧನೆಯ ಬೇರೆ ಚಟುವಟಿಕೆಗಳಿಗೆ ಗಮನ ಹರಿಸಲು ತುಂಬಾ ಸಹಕಾರಿಯಾಗುತ್ತಿದೆ.

ಅನೇಕ ದಾನಿಗಳು ಹಲವಾರು ವರ್ಷಗಳಿಂದ ಉದಾರ ಧನಸಹಾಯ ನೀಡುತ್ತಿರುವುದರಿಂದ ಈ ಅನ್ನದಾನದ ಕಾರ್ಯಕ್ರಮವು ಸಾಧ್ಯವಾಗುತ್ತಿದೆ. ವಿಶಾಲ ಮನೋಭಾವದ ಭಾವನಾತ್ಮಕ ಸಂಬಂಧ ಹೊಂದಿರುವ ಸಮುದಾಯದವರು ಮತ್ತು ಇತರ ಭಕ್ತಾದಿಗಳಿಗೆ ಸಂಘವು ಚಿರಋಣಿಯಾಗಿರುತ್ತದೆ.

**ಹೆಚ್.ಆರ್.ಲಲಿತಾ**

## ಧರ್ಮದ ಹಾದಿಯಲ್ಲಿ ಸಾಗಿದಾಗ

ಕುರುಕ್ಷೇತ್ರದ ಯುದ್ಧವೆಲ್ಲಾ ಮುಗಿದು ಒಂದಿಷ್ಟು ವರ್ಷಗಳ ಕಾಲ ಸುಖದಿಂದ ರಾಜ್ಯಭಾರ ಮಾಡಿದ ಯುಧಿಷ್ಠಿರನು ಈ ಲೋಕದ ಯಾತ್ರೆ ಸಾಕೆನಿಸಿ ತನ್ನ ತಮ್ಮಂದಿರು ಹಾಗೂ ಪತ್ನಿ ದ್ರೌಪದಿಯ ಜೊತೆ ಸ್ವರ್ಗಾರೋಹಣವನ್ನು ಮಾಡಲು ಬಯಸಿದ. ತಾನು ಅಂದುಕೊಂಡಂತೆ ಹಸ್ತಿನಾವತಿಯಲ್ಲಿ ತನ್ನ ವಂಶದ ಕುಡಿ ಪರೀಕ್ಷಿತನನ್ನು, ಇಂದ್ರಪ್ರಸ್ಥದಲ್ಲಿ ಯಾದವ ವಂಶದ ವಜ್ರನನ್ನು ರಾಜರುಗಳನ್ನಾಗಿ ನೇಮಿಸಿ, ಅವರ ರಕ್ಷಣೆ ಜವಾಬ್ದಾರಿ ಯನ್ನು ಸುಭದ್ರೆಯ ಹೆಗಲಿಗೆ ವಹಿಸಿ, ಪತ್ನಿ ಹಾಗೂ ಸಹೋದರರ ಜೊತೆಗೆ ನಾರುಡಿಗೆಯಲ್ಲಿ ಹಿಮಾಲಯ ಪರ್ವತದ ಕಡೆಗೆ ನಡೆದ.

ಸ್ವರ್ಗವನ್ನು ಏರುತ್ತಿರುವ ಅವರಿಗೆ ಅದು ಅಂತಿಮ ಪ್ರಯಾಣವಾದರೂ ದುಃಖವೆನಿಸಲಿಲ್ಲ, ಯಾಕೆಂದರೆ ಕಾಲದ ಮಹಿಮೆ. ಎಲ್ಲರೂ ಒಂದಲ್ಲಾ ಒಂದು ದಿನ ಅದರ ಆಧೀನರಾಗಬೇಕೆಂಬ ಭಾವನೆ. ಆದರೆ ಪ್ರಯಾಣವು ಸಾಕಷ್ಟು ಪ್ರಯಾಸದಿಂದ ಕೂಡಿತ್ತು. ಮೊದಲು ಯುಧಿಷ್ಠಿರ, ಅವನ ಜೊತೆಗೆ ಶ್ವಾನ ಬೇರೆ. ಅವನ ಹಿಂದೆ ಭೀಮ, ಭೀಮನ ಹಿಂದೆ ಅರ್ಜುನ, ನಂತರದಲ್ಲಿ ನಕುಲ–ಸಹದೇವರು. ಕೊನೆಯಲ್ಲಿ ದ್ರೌಪದಿ. ಅವರ ಪಯಣ ಇನ್ನೇನು ಮೇರು ತಲುಪಲಿದೆ ಎನ್ನುವಾಗಲೇ ದ್ರೌಪದಿ ತನ್ನ ಯಾತ್ರೆ ಮುಗಿಸಿ ಅಲ್ಲಿಯೇ ಕುಸಿದು ಬಿದ್ದಳು. ಇದನ್ನು ಗಮನಿಸಿದ ಭೀಮನು ಆಶ್ಚರ್ಯದಿಂದ "ಅವಳೇನು ಅಧರ್ಮ ಮಾಡಿದ್ದಳು, ಈ ರೀತಿ ಕುಸಿದು ಬಿದ್ದಳು?" ಎಂದು ಕೇಳಿದ. ಅವಳು ಕೇವಲ ಅರ್ಜುನನ ಪಕ್ಷಪಾತಿಯಾಗಿದ್ದಳು, ಹಾಗಾಗಿ ಅವಳು ಪೂರ್ತಿಯಾಗಿ ಸ್ವರ್ಗಾರೋಹಣ ಮಾಡಲಾಗಲಿಲ್ಲ ಎಂದ ಯುಧಿಷ್ಠಿರ. ಮುನ್ನಡೆಯುತ್ತ ಹೋದಂತೆಲ್ಲಾ, ಸಹದೇವ–ನಕುಲ, ಅರ್ಜುನ ಹೀಗೆ ಒಬ್ಬೊಬ್ಬರಾಗಿ ತಾವು ಎಸಗಿದ ಒಂದೊಂದು ಬಗೆಯ ಧರ್ಮಚ್ಯುತಿಯಿಂದ ಅಲ್ಲಲ್ಲಿಯೇ ಪತನರಾದರು. ಭೀಮ ಕೂಡ ಪರರ ಹಸಿವನ್ನು ಲೆಕ್ಕಿಸದೆ ಅತಿಯಾಗಿ ತಿಂದದ್ದಕ್ಕೆ ಅವನ ಚಾಪಲ್ಯದ ಕಾರಣಕ್ಕಾಗಿಯೇ ಅರ್ಧ ದಾರಿಯಲ್ಲಿ ಕುಸಿಯಬೇಕಾಯಿತು. ಕೊನೆಯಲ್ಲಿ ಯುಧಿಷ್ಠಿರನು ಮಾತ್ರ ಎಲ್ಲರಿಗಿಂತಲೂ ಎತ್ತರದ ಸ್ಥಾನ ಪಡೆಯಲು ಸಾಧ್ಯವಾಯಿತು. ಅದಕ್ಕೆ ಕಾರಣವಾದುದು ಅವನು ಚಾಚೂ ತಪ್ಪದೆ ಪಾಲಿಸಿದ ಧರ್ಮ.

"ಯಾವ ನಡವಳಿಕೆ ನಮ್ಮನ್ನು ಉನ್ನತವಾದ ಸ್ಥಾನಕ್ಕೆ ತೆಗೆದುಕೊಂಡು ಹೋಗುವುದೋ ಅದುವೇ ಧರ್ಮ" ಎಂದು ನಮ್ಮ ಹಿರಿಯರು ಹೇಳುತ್ತಾರೆ. ಸಮಯೋಚಿತ ವಾದ ನಮ್ಮ ನಿಲುವು, ನಡವಳಿಕೆಗಳೇ ಧರ್ಮ. ಅವು ನಮ್ಮನ್ನು ಎತ್ತರಕ್ಕೆ ಕೊಂಡೊಯ್ಯುತ್ತದೆ. ಪ್ರತಿ ಕಾರ್ಯಗಳಲ್ಲಿಯೂ ಧರ್ಮಪ್ರಜ್ಞೆ ಅಪೇಕ್ಷಣೀಯ. ಆದರೆ ಧರ್ಮದ ಆಚರಣೆ ಬಲು ಸೂಕ್ಷ್ಮ. ಹೇಳಿದಷ್ಟು ಸುಲಭವಿಲ್ಲವದು. ನಮ್ಮೊಳಗೆ ಇರುವ ಅತಿಯಾದ ವ್ಯಾಮೋಹ, ಪಕ್ಷಪಾತ, ಹಮ್ಮು–ಬಿಮ್ಮುಗಳೆಲ್ಲವೂ ನಮ್ಮ ಧರ್ಮಾಚರಣೆಗೆ ಪ್ರತಿರೋಧ ಒಡ್ಡುತ್ತಿರುತ್ತವೆ. ನಮಗೆ ಎದುರಾಗುವ ಕೆಲವು ಪರಿಸ್ಥಿತಿ ನಮ್ಮನ್ನು ಅಧರ್ಮದ ಕಡೆಗೆ ನೂಕಬಹುದು. ಇವುಗಳನ್ನು ಹಿಮ್ಮೆಟ್ಟಿಸಬೇಕು. ನಮ್ಮ ನಡೆ–ನುಡಿಗಳಲ್ಲಿ, ಆಂತರ್ಯದಲ್ಲಿ ಪರಿಶುದ್ಧತೆ ಇದ್ದಾಗ ಮಾತ್ರವೇ ಯಾವುದು ಧರ್ಮವೆಂಬ ಸ್ಪಷ್ಟ ಅರಿವು ನಮಗಾಗುವುದು. ಧರ್ಮಸೂಕ್ಷ್ಮತೆಯನ್ನು ಅರಿತು ಶುದ್ಧ ಅಂತಃಕರಣಗಳಿಂದ ಸನ್ಮಾರ್ಗದಲ್ಲಿ ನಡೆದರೆ ನಾವು ಧರ್ಮವನ್ನು ಕಾಪಾಡಿದಂತೆ. "ಧರ್ಮೋ ರಕ್ಷಿತ ರಕ್ಷಿತಃ" ಎಂಬ ಮಾತಿನಂತೆ ನಮ್ಮಿಂದ ರಕ್ಷಿಸಲ್ಪಡುವ ಧರ್ಮವೇ ನಮ್ಮನ್ನು ಬಿಡದೇ ಕಾಪಾಡುವುದು.

**ಎಸ್. ಶ್ರೀನಿವಾಸಯ್ಯ**

## ಶುಭಕೃತವೇ ಏನೇನು ತರುತ್ತೇ

ಜಗದ ಬಾಳೆಯ ತೋಟದಲಿ
ಶುಭಕೃತವು ಬರಲು ಏನೋ
ಎಂತೋ ಜುಮ್ಮೆಂದಿತು ಮನವು
ಬೆಚ್ಚಿತು ಮನವು ಶುಭದ ಆಶಯದಿಂ
ಪ್ಲವನಾಮ ಸಂವತ್ಸರದ ಸಂಭವಿಸಿದ
ಏರುಪೇರು ವೈವಿಧ್ಯ ತರಂಗಾಂತರ
ನಡುವೆ ರಂಗುರಂಗಿನ ತೆರದಿ ಮನವ
ಮುಟ್ಟಿದ ಹೊಯ್ದಾಟ ತೊಳಲಾಟ
ಆರೋಗ್ಯ–ಅನಾರೋಗ್ಯದ ಚಿಂತೆಗಳಲ್ಲಿ
ಆತಂಕದ ಛಾಯೆ ಮೂಡಿರಲು ಬಂದಿರುವೆ
ನೀನು ಹೊಸ ಭಾವದಲಿ ಹೊಸ ಹುರುಪಿನಲಿ
ಶುಭಕೃತು ನಮಗೆ ಶುಭಾಶಯಗಳ ಕೋರುತ
ಕಾಲನ ಚಲನೆಯ ನಿಯಮದಲಿ ನೀನು
ತರುವ ಸಂತಸದ ಚಿಲುಮೆಯಿಂದ
ಸಸ್ಯಗಳು ಚಿಗುರಿ ಪ್ರಾಣಿವರ್ಗ ಸಂತಸದಿಂ
ಮೈದುಂಬಿ ಬರಲ್ ಜಗಜನತೆ ಮನ
ತುಂಬಿ ವಸಂತ ಕಾಲದ ದೇವತೆಯಾಗಿ
ಧರೆಗಿಳಿದಿರಲು ನಗುತಿದೆ ಧರೆಯಿಂದು
ನವಭಾವದಲಿ ನವಚೈತನ್ಯದಲಿ ನಗಿಸು
ನಮ್ಮನು ಅನವರತ ಧಾರೆ ಧಾರೆಯಾಗಿ
ಪನ್ನೀರಿನ ಸಿಂಚನದಿಂ
ಸರ್ವೆ ಜನಾ ಸುಖಿನೋ ಭವಂತು.

**ಜಿ.ಎಸ್.ಸತ್ಯಮೂರ್ತಿ**
**9844469581**

# ನಾಗಾರಾಧನೆ ಛಾಯಾಚಿತ್ರಗಳು

ಚಿತ್ರಗಳು : ಕೆ. ಸಿ. ನಟರಾಜನ್

















# ನಾಗಾರಾಧನೆ ಛಾಯಾಚಿತ್ರಗಳು













# ನಾಗಾರಾಧನೆ ಛಾಯಾಚಿತ್ರಗಳು


















# ನಾಗಾರಾಧನೆ ಛಾಯಾಚಿತ್ರಗಳು













## ನಮ್ಮನ್ನಗಲಿದ ನಮ್ಮವರಿಗೆ ಗೌರವಪೂರ್ವಕ ಶ್ರದ್ಧಾಂಜಲಿ




ಸೌಂದರ ಕೋಕಿಲಮ್ – 79 – 21.12.2021 – ಸದಸ್ಯ ಡಾ॥ ಎಮ್.ಎನ್.ಅಮೃತ್‌ಕುಮಾರ್ ರವರ ಪತ್ನಿ



ಇಂದಿರಮ್ಮ – 4.1.2022 – ಸದಸ್ಯರಾದ ಶ್ರೀಯುತ ಎಸ್.ಎಲ್. ಭಾನುಪ್ರಕಾಶ್, ಎಸ್.ಎಲ್.ಸುಬ್ರಹ್ಮಣ್ಯ ಮತ್ತು ಎಸ್.ಎಲ್.ಪ್ರಶಾಂತ್ ರವರ ಚಿಕ್ಕಮ್ಮ




ಲಕ್ಷ್ಮೀದೇವಮ್ಮ – 92 – 6.1.2022 – ಸದಸ್ಯರಾದ ಶ್ರೀ ಎಸ್.ರವೀಂದ್ರ ಮತ್ತು ಎಸ್.ವೆಂಕಟಕೃಷ್ಣರವರ ತಾಯಿ



ಕೆ.ಆರ್.ಲಕ್ಷ್ಮೀನಾರಾಯಣನ್ – 92 – 12.1.2022 – ಹಿರಿಯ ಸದಸ್ಯ




ಬಿ.ಎನ್.ಶ್ರೀನಿವಾಸಯ್ಯ – 104 – 19.1.2022 – ಸದಸ್ಯೆ ಶ್ರೀಮತಿ ವಸುಂಧರರವರ ತಂದೆ




ಕೆ.ಶಕುಂತಲ – 90 – 24.1.2022 – ಸದಸ್ಯ ಶ್ರೀ ಕೆ.ಬಾಲಸುಬ್ರಹ್ಮಣ್ಯರವರ ತಾಯಿ




ಕೆ.ಟಿ.ಸಂಪಂಗಿರಾಮನ್ – – 92 – 29.1.2022 – ಸದಸ್ಯ ಶ್ರೀ ಕೆ.ಎಸ್.ಶಿವಕುಮಾರ್‌ರವರ ತಂದೆ.



ಸದಸ್ಯ ಬಿ.ಜಿ.ರಾಮಣ್ಣ – 84 – 27.2.2022 – ಸದಸ್ಯ ಬಿ.ಜಿ.ಅನಂತಪದ್ಮನಾಭರವರ ಸೋದರ.




ಸದಸ್ಯ ಎಸ್.ವಿ.ಅರುಣ್ ಕುಮಾರ್ – 69 – ಸದಸ್ಯರಾದ ಸೇಲಂ ಸುಬ್ರಹ್ಮಣ್ಯಂ, ಎಸ್.ವಿ.ಪಾರ್ವತಿ ಮತ್ತು ಎಸ್.ವಿ.ಜಗದೀಶ್‌ರವರ ಸೋದರ.



ಶ್ಯಾಮ್ ಸುಂದರ್ – 71 – 22.3.2022 – ಸದಸ್ಯ ಜಿ.ಎನ್.ಪ್ರಸಾದ್‌ರವರ ಸಹೋದರ.



ನಾಗೇಂದ್ರ ಬಾಬು – 69 – 4.4.2022 ಸದಸ್ಯರಾದ ಶ್ರೀಯುತ ಎಸ್.ಎಲ್. ಭಾನುಪ್ರಕಾಶ್, ಎಸ್.ಎಲ್.ಸುಬ್ರಹ್ಮಣ್ಯ ಮತ್ತು ಎಸ್.ಎಲ್.ಪ್ರಶಾಂತ್‌ರವರ ಸಹೋದರ



ಸದಸ್ಯ ಎಸ್. ಗುರು ಪ್ರಸಾದ್ 61 – 21.4.2022 ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಆರ್. ಎ. ಶ್ಯಾಮಸುಂದರ್ ಅವರ ಸೋದರ ಸಂಬಂಧಿ

## ವಿದ್ಯಾನಿಧಿಗೆ ದೇಣಿಗೆ ನೀಡಿದ ಸದಸ್ಯರು

| | |
|---|---|
| ಸುಲೋಚನ ಆರ್ ರಾವ್ | ಸೇತುರಾಮ್ ಕೆ.ಜಿ |
| ರಾಜೇಶ್ವರಿ ಆರ್ | ಸತ್ಯಮೂರ್ತಿ ಜಿ.ಎಸ್ |
| ಶ್ರೀಹರಿ ಉಡುಪ | ಅಜಯ್ ಕುಮಾರ್ ಎನ್ |
| ರವಿಕಿರಣ್ ಎಚ್ ಕೆ | ಶೇಖರ್ ಕೆ.ಸಿ |
| ನರೇಂದ್ರ ವಿ | ರಮೇಶ್ ಆರ್.ಎಸ್ |

## ಹುಂಡಿಯಿಂದ ಬಂದ ದೇಣಿಗೆ

| | |
|---|---|
| ರೂಪ ವಿಶ್ವೇಶ್ | ಕೃಷ್ಣ ಎಸ್ |
| ಕೃಷ್ಣಮೂರ್ತಿ ಡಿಆರ್ | ಜಗನ್ನಾಥ್ ಟಿ.ಪಿ |
| ಲತಾ ಎ.ಆರ್ | ಶ್ರೀನಿವಾಸ ಕೆ.ಜಿ |
| ತಾರಾ ರವೀಂದ್ರ | ಕೃಷ್ಣಮೂರ್ತಿ ಡಿ.ಆರ್. |
| ರಮಾ ಸುಬ್ಬರಾವ್ | |

## ಗೃಹಪ್ರವೇಶ

ಹಿರಿಯ ಸದಸ್ಯ ಶ್ರೀ ಹೆಚ್.ಪಿ.ಶ್ರೀನಿವಾಸ್‌ರವರ ಪುತ್ರ ಸದಸ್ಯ ಹೆಚ್.ಎಸ್.ಪರಮೇಶ್ವರ್ ಮತ್ತು ಶ್ರೀಮತಿ ರಮ್ಯಾ ಪರಮೇಶ್ವರ್‌ರವರು ತಮ್ಮ ನೂತನ ಗೃಹ "ಓಂಕಾರ್"ದ ಗೃಹಪ್ರವೇಶವನ್ನು ದಿನಾಂಕ 18.2.2022ರಂದು ಬೆಂಗಳೂರಿನಲ್ಲಿ ನೆರವೇರಿಸಿದರು.
ಸಂಘವು ಶುಭ ಹಾರೈಸುತ್ತದೆ.

## ॥ ನಾಗಾರಾಧನೆ ಆಚರಣೆಯ ವಿಧಿವಿಧಾನಗಳು.॥

ಬೃಹಚ್ಚರಣ ಸಮುದಾಯದವರು ಕಿತ್ತಿಗಾನಹಳ್ಳಿಯ ನಾಗೇಶ್ವರ ಕ್ಷೇತ್ರದಲ್ಲಿ ಪ್ರತಿ ವರ್ಷ ಪಾಲ್ಗುಣ ಶುದ್ಧ ಪಂಚಮಿಯಂದು ತಲತಲಾಂತರಗಳಿಂದ ಆಚರಿಸುವ ನಾಗಾರಾಧನೆಯು ಪ್ರಮುಖವಾದದ್ದು.

ಬೃಹಚ್ಚರಣ ಸಮುದಾಯದ ನಾಗಾರಾಧನೆಯ ಆಚರಣೆಯು ಒಂದು ಅಚಾತುರ್ಯದಿಂದ ನಡೆದು ಹೋದ ಸರ್ಪ ಸಂಸ್ಕಾರದ ಶ್ರಾದ್ಧದ ದಿನ. ಅಲ್ಲಿನ ಆಚರಣೆಯು ವಿಧಿವತ್ತಾಗಿ ಶ್ರಾದ್ಧ ಕರ್ಮಗಳಿಗೆ ಅನುಸಾರವಾಗಿ ನಡೆಯತಕ್ಕ ಆಚರಣೆ.

ಆಚರಣೆಯಲ್ಲಿ ಪಾಲ್ಗೊಳ್ಳುವ ಕುಟುಂಬದ ಸದಸ್ಯರು, ಅಂದು ಬೆಳಗಿನಿಂದ ಉಪವಾಸವಿದ್ದು ಶುಭ್ರವಾದ ಮಡಿಯುಟ್ಟು ಅಶ್ವತ್ಥ ಕಟ್ಟೆಯಲ್ಲಿನ ನಾಗಪ್ಪ ವಿಗ್ರಹಗಳಿಗೆ ತನಿ ಎರೆದು, ಮಧ್ಯಾಹ್ನದ ನಂತರವೇ ಆಹಾರ ಸೇವಿಸುವುದು ಆಚರಣೆಯ ಕ್ರಮ. ಅಂದು ಕೇವಲ ಒಪ್ಪತ್ತಿನ ಭೋಜನ ಮಾತ್ರ. ವೃದ್ಧರು, ಅನಾರೋಗ್ಯ ಮುಂತಾದ ಕಾರಣದಿಂದ ಬಳಲುವವರು ರಾತ್ರಿಯಲ್ಲಿ ಅಲ್ಪವಾದ ಲಘು ಉಪಾಹಾರ ಸೇವಿಸಲು ವಿನಾಯ್ತಿ.

ಅಂದಿನ ಮಧ್ಯಾಹ್ನದ ಭೋಜನದ ಪಾಕಗಳೆಲ್ಲವೂ, ಶ್ರಾದ್ಧ ದಿನಗಳಲ್ಲಿನ ಸಂಪ್ರದಾಯದ ಅಡುಗೆಯಂತೆಯೇ ಕ್ಷೇತ್ರದಲ್ಲೇ ಮಡಿಯಿಂದ ತಯಾರಿಸಿದ ಪದಾರ್ಥಗಳನ್ನು ಸೇವಿಸುವ ಕ್ರಮ.

ಕಾಲ ಏನೇ ಬದಲಾದರೂ ಆಚರಣೆಯ ಈ ವಿಧಿ ವಿಧಾನಗಳಲ್ಲಿ ಬದಲಾವಣೆ ಮಾಡುವುದು ಸಮುದಾಯದ ಕುಟುಂಬಸ್ಥರಿಗೆ ಶ್ರೇಯಸ್ಕರವಲ್ಲ. ನಮ್ಮಗಳ ಮನಸೋ ಇಚ್ಛೆಯಂತೆ ಆಚರಣೆಯ ವಿಧಿವಿಧಾನಗಳಲ್ಲಿ ಬದಲಾವಣೆ, ಇತರರು ಯಾರೋ ಹೊರಗಡೆ ತಯಾರಿಸಿದ ಆಹಾರ ಪದಾರ್ಥಗಳನ್ನು ತಂದು ಸಮುದಾಯದ ಭಕ್ತಾದಿಗಳಿಗೆ ವಿತರಿಸುವುದು ಕುಟುಂಬಸ್ಥರಿಗೆ ಶ್ರೇಯಸ್ಕರವಲ್ಲ.

ಇತ್ತೀಚಿಗೆ ಕೆಲವು ಸಮುದಾಯದ ಭಕ್ತಾದಿಗಳು ತಮ್ಮ ಕೋರಿಕೆಗಳು, ಇಷ್ಟಾರ್ಥಗಳು ಸಿದ್ಧಿಸಿದಾಗ ನಾಗಾರಾಧನೆ ಯಂದು ಹೊರಗಿನಿಂದ ತಂದ ಸಿಹಿ ಪದಾರ್ಥಗಳನ್ನು ಊಟದ ಸಮಯದಲ್ಲಿ ವಿತರಿಸುವುದು ಕಾಣಬರುತ್ತಿದೆ. ಅವರುಗಳ ಉದ್ದೇಶವು ಖಂಡಿತವಾಗಿ ಉತ್ತಮವಾದುದ್ದೆ, ಆದರೆ ಅದು ಆಚರಣೆಯ ವಿಧಿ ವಿಧಾನಗಳಿಗೆ ವಿರುದ್ಧವಾದದ್ದು ಎಂಬುದು ಗಮನಿಸತಕ್ಕದ್ದು.

ಈ ನಿಟ್ಟಿನಲ್ಲಿ ಭಕ್ತಾದಿಗಳು ತಮ್ಮ ಸಂಕಲ್ಪ ಇಷ್ಟಾರ್ಥಗಳನ್ನು ಈಡೇರಿಸುವಲ್ಲಿ ಪರಿಹಾರ ಕಂಡುಕೊಳ್ಳಲು, ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಸಂಪರ್ಕಿಸಿ, ತಮ್ಮ ಇಷ್ಟಾರ್ಥಗಳನ್ನು ಈಡೇರಿಸುವ ಬಗ್ಗೆ ಸಮರ್ಪಕವಾದ ಸೂಚನೆ ಸಲಹೆಗಳನ್ನು ಪಡೆದುಕೊಳ್ಳುವುದು ಉತ್ತಮ ಎಂಬ ಅಭಿಪ್ರಾಯದೊಂದಿಗೆ, ಧನ್ಯವಾದಗಳು.

#ಸುಬ್ಬ ಸುಬ್ಬ ಗೋವಿಂದ, ಸುಬ್ರಹ್ಮಣ್ಯ ಗೋವಿಂದ.

**ವಿ.ಎಸ್.ಮಣಿ**

**9845055582**

## ಮನವಿ

### ಶ್ರೀನಾಗೇಶ್ವರ ಕ್ಷೇತ್ರದಲ್ಲಿನ ಅಶ್ವತ್ಥಕಟ್ಟೆಯ ಸುತ್ತಲೂ ಭಕ್ತಾದಿಗಳ ಸುರಕ್ಷತಾ ತಡೆ (Barricade)

ಈ ವರ್ಷದ ಫಾಲ್ಗುಣ ಶುದ್ಧ ಪಂಚಮಿಯಂದು ಶ್ರೀ ನಾಗೇಶ್ವರ ಕ್ಷೇತ್ರದಲ್ಲಿ ಜರುಗಿದ ನಾಗಾರಾಧನೆಯ ಸಂದರ್ಭದಲ್ಲಿ ಕೆಲವರು ಹಿರಿಯ ಸದಸ್ಯರಿಂದ ಒಂದು ಅಭಿಪ್ರಾಯ ವ್ಯಕ್ತವಾಯಿತು. ನಾಗೇಶ್ವರನಿಗೆ ತನಿ ಎರೆಯಲು ಅಶ್ವತ್ಥಕಟ್ಟೆಯ ಮೇಲೆ ಆಗಮಿಸುವ ಸಮಸ್ತ ಭಕ್ತಾದಿಗಳ ಸುರಕ್ಷತೆಯ ದೃಷ್ಟಿಯಿಂದ ಖಾಯಂ ಆಗಿ ಇರುವಂತೆ ಕಟ್ಟೆಯ ಸುತ್ತಲೂ ಸುರಕ್ಷಾ ತಡೆಯನ್ನು (barricade) ನಿರ್ಮಿಸಬೇಕೆಂದು ಸದಸ್ಯರು ಸಂಘದ ಕಾರ್ಯಕಾರಿ ಸಮಿತಿಗೆ ಸಲಹೆ ನೀಡಿದರು.

ಸಂಘದ ಸದಸ್ಯರ ಈ ಸಲಹೆಯನ್ನು ಮಾರ್ಚ್ 13ರಂದು ನಡೆದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಚರ್ಚಿಸಲಾಯಿತು ಮತ್ತು ಭಕ್ತಾದಿಗಳೆಲ್ಲರ ಹಿತದೃಷ್ಟಿಯಿಂದ ಇದನ್ನು ಕಾರ್ಯಗತಗೊಳಿಸಬೇಕೆಂದು ನಿರ್ಧರಿಸಲಾಯಿತು.

ಕಾರ್ಯಕಾರಿ ಸಮಿತಿ ಸದಸ್ಯರು ಮಾರ್ಚ್ 16ರಂದು ಶ್ರೀ ನಾಗೇಶ್ವರ ಕ್ಷೇತ್ರಕ್ಕೆ ಭೇಟಿನೀಡಿ ಈ ಕಾಮಗಾರಿಯ ತಾಂತ್ರಿಕ ವಿವರಗಳನ್ನು ಚರ್ಚಿಸಿದರು. ಸ್ಟೀಲ್ ಪೈಪ್ ಗಳಿಂದ ನಿರ್ಮಿಸಲ್ಪಡಲಿರುವ ಈ ಕಾಮಗಾರಿಗೆ ತಗಲುವ ವೆಚ್ಚದ ಅಂದಾಜನ್ನು ತರಿಸಿಕೊಳ್ಳಲಾಯಿತು. ಇದಕ್ಕೆ ತಗಲುವ ಒಟ್ಟು ವೆಚ್ಚ ಸುಮಾರು ರೂ. 1,00,000 ಗಳಾಗಲಿದೆ.

ಈ ಕಾಮಗಾರಿಯನ್ನು ಕಾರ್ಯಗತಗೊಳಿಸಲು ಸಂಘದ ಸದಸ್ಯರಿಂದ ಉದಾರವಾಗಿ ಧನಸಹಾಯವನ್ನು ಕೋರುತ್ತದೆ.

ಇನ್ನು ಮೂರು, ನಾಲ್ಕು ತಿಂಗಳುಗಳಲ್ಲಿ ಇದನ್ನು ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ. ಸಮಿತಿಯು ಈ ನಿಟ್ಟಿನಲ್ಲಿ ಸದಸ್ಯರ ನೆರವು ಹಾಗೂ ಬೆಂಬಲವನ್ನು ಬೇಡುತ್ತದೆ.

## ವಾರ್ಷಿಕ ನಿರ್ವಹಣಾ ವೆಚ್ಚ ನೀಡಿದ ಸದಸ್ಯರು

| | | |
|---|---|---|
| ಗೋವಿಂದರಾಜ್ ಕೆ | ಶಿವಕುಮಾರ್ ನಟರಾಜನ್ | ಅಶೋಕ್ ಕುಮಾರ್ ಜಿ |
| ಅನಂತಸ್ವಾಮಿ ಎಸ್ | ಕೃಷ್ಣ ಎಸ್ | ಗಾಯತ್ರಿ ದೇವಿ |
| ಸಂದೀಪ್ ಬಿಪಿ | ರಾಧಾ ನಾಗರಾಜ್ | ಗಣಪತಿ ವೈ.ಆರ್ |
| ರಘು ಎಆರ್ | ಮುರಳಿ ಕೃಷ್ಣ ಸಿ | ಗೌರಿ ನಟರಾಜ್ |
| ರವಿ ಎಆರ್ | ಸರಸ್ವತಿ ರಾಮಚಂದ್ರ | ನಟರಾಜ ಬಿ.ಸಿ |
| ರಜನಿ ಶ್ರೀವತ್ಸ | ಜಯರಾಮ್ ಕೆ.ಸಿ | ಡಾ|| ಶಶಿಕುಮಾರ್ ಎಂಎಸ್ |
| ರಜನಿ ದತ್ತಾ | ಅರುಣ್ ಜೆ ಕಾರ್ತಿಕ್ | ಶೈಲೇಶ್ ಎಸ್ |
| ಸೂರ್ಯಪ್ರಕಾಶ್ ಬಿ.ಎ | ಪದ್ಮಿನಿ ರಾಮಚಂದ್ರ | ರವಿ ಸರ್ಜಾಪುರ |
| ಸತೀಶ್ ಬಿ.ಎಸ್ | ರವಿಶಂಕರ್ ಕೆ.ವಿ | ಉಮಾ ಜಯರಾಮ್ |
| ಹನುಮಂತನ್ ಕೆ | ಗಣೇಶ್ ರಾಮ್ ಎ.ವಿ | ಬಾಲಸುಬ್ರಮಣ್ಯ ಜಿ.ವಿ |
| ಶೇಷಾದ್ರಿ ಬಿ.ವಿ | ನೇತ್ರಾನಂದ ಟಿ.ಆರ್ | ಶ್ರೀಕಾಂತ್ ಆರ್.ಎ. |
| ಸುಂದರ್ ಎನ್ | ಸುರೇಶ್ ಚಲುವರಾಜ್ | ಕುಮಾರ್ ಬಿ.ಸಿ |
| ರವಿಶಂಕರ್ ಎಸ್ | ವಿಜಯ್ ಕುಮಾರ್ ಎಂ.ಆರ್ | ಸರಸ್ವತಿ ಕೆ |
| ವೈದ್ಯನಾಥ್ ಎ.ಎಸ್ | ವೆಂಕಟೇಶ್ ಪ್ರಸಾದ್ ಆರ್ | ರಾಜೇಶ್ವರಿ ಆರ್ |
| ಲತಾ ಎಸ್. ಆರ್ | ಮಹೇಶ್ ಆರ್. ಎಸ್ | ಶ್ಯಾಮಸುಂದರ್ ಆರ್.ಎ. |
| ರೂಪ ವಿಶ್ವೇಶ್ | ಕೃಷ್ಣಸ್ವಾಮಿ ಛಾಯಾಪತಿ | ಕರ್ನಲ್ ರಾಜನ್ ವಿ.ಜಿ |
| ತಾರಾ ರವೀಂದ್ರ | ನಾಗರಾಜನ್ ಎಸ್ | ಬಾಲಸುಬ್ರಮಣಿ ಎಸ್ |
| ರಮಾ ಸುಬ್ಬರಾವ್ | ಸುನಂದಾ ಗೋವಿಂದರಾಜು | ಶ್ರೀನಿವಾಸ ಕೆ.ಜಿ |
| ರಾಜಣ್ಣ ಕೆ | ಸತ್ಯನಾರಾಯಣ ಎಮ್.ಆರ್ | ಸತ್ಯ ಮೂರ್ತಿ ಡಿ |
| ಸ್ವಾಮಿನಾಥನ್ ಆರ್.ಎನ್ | ಅಜಯ್ ಕುಮಾರ್ ಎನ್ | ವಿಶ್ವೇಶ್ವರನ್ ಡಿ |
| ಹರ್ಷ ನಾಗರಾಜು | ಶ್ರೀಧರ್ ಬಿ | ನಟರಾಜನ್ ಕೆ.ಸಿ |
| ಸರಸ್ವತಿ ನಟರಾಜನ್ | ಶುಭ ಗಾಯತ್ರಿ | ಶಶಿಕಲಾ ಪಿ |
| ಪ್ರದೀಪ್ ಎಸ್ | ರಘುನಾಥ್ ಇ | ಲಕ್ಷ್ಮಿ ದೇವಿ ಜಿ.ಪಿ |
| ಶೇಖರ್ ಕೆ.ಸಿ | ತ್ಯಾಗರಾಜನ್ ಎಸ್ | ರಮೇಶ್ ಆರ್.ಎಸ್ |
| ಸುಮಾ ಅರುಣ್ | ಅನ್ನಪೂರ್ಣ | ರಮೇಶ್ ಬಾಬು ಬಿ.ಸಿ |
| ಅನಿಲ್ ಕುಮಾರ್ ಬಿ.ಆರ್ | ಅನುರಾಧಾ ತ್ಯಾಗರಾಜನ್ | ಸೂರಜ್ ಅರುಣ್ |
| ಅರುಣ್ ವಿ | ಎಸ್. ಎನ್. ಕೃಷ್ಣಮೂರ್ತಿ | |

### ಉಪನಯನ

ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಕೆ.ಎಸ್.ಅರುಣ್ ಮತ್ತು ಶ್ರೀಮತಿ ವಿನುತ ಅರುಣ್‌ರವರು ದಿನಾಂಕ 23.1.2022 ರಂದು ಅವರ ಪುತ್ರ ಚಿ. ವೈಭವನ ಉಪನಯನವನ್ನು ಬೆಂಗಳೂರಿನಲ್ಲಿ ನೆರವೇರಿಸಿದರು.

ಪೋಷಕ ಶ್ರೀ ಆರ್. ವೆಂಕಟೇಶ ಪ್ರಸಾದ್ ಮತ್ತು ಶ್ರೀಮತಿ ಸಿ. ಆರ್. ನಾಗರತ್ನರವರು ದಿನಾಂಕ 21.4.2022 ರಂದು ಅವರ ಪುತ್ರ ಚಿ. ಉಜ್ವಲ್‌ರವರ ಉಪನಯನವನ್ನು ಬೆಂಗಳೂರಿನಲ್ಲಿ ನೆರವೇರಿಸಿದರು.

**ವಟುಗಳಿಗೆ ಸಂಘದ ಶುಭ ಆಶೀರ್ವಾದಗಳು.**

## ಅನ್ನ ಸಂತರ್ಪಣೆಗೆ / ನಾಗಾರಾಧನೆಗೆ ದೇಣಿಗೆ ನೀಡಿದ ಸದಸ್ಯರು ಹಾಗೂ ಸಂಘದ ಹಿತೈಷಿಗಳು

ವೆಂಕಟೇಶ್ ಜಿ.ಎಸ್
ಉಮೇಶ್ ಎಸ್
ರಮೇಶ್ ಆರ್
ಆರ್ ಎಸ್. ರಾವ್
ವೈಜಯಂತಿ
ವಿದ್ಯಾ ಮೂರ್ತಿ
ಶ್ರೀಕಂಠೇಶ್ವರ ಕೆ
ಅರುಣ್‌ಕುಮಾರ್ ಆರ್. ಪಿ
ರಾಜೇಶ್ವರಿ
ಸೂರ್ಯ ಭಗವಾನ್
ಸೂರ್ಯಪ್ರಕಾಶ್ ಬಿ.ಎ
ಸತೀಶ್ ಬಿ.ಎಸ್
ಬಾಲಸುಬ್ರಮಣ್ಯ ಕೆ
ಕೃಷ್ಣನ್ ಟಿ.ಎಸ್
ಅಂಬಾ ಎನ್
ಸುಂದರ್ ಎನ್
ಸುಮನಾ ಸತ್ಯನಾರಾಯಣ
ಸಹನಾ ಕಾರ್ತಿಕ್
ಸುವರ್ಣ ಆರ್. ಪಿ
ಅನಿಲ್‌ಕುಮಾರ್ ಬಿ. ಆರ್
ನರೇಂದ್ರ ವಿ
ರಘುರಾಮ್ ಟಿ.ಜೆ
ರವಿಶಂಕರ್ ಎಸ್
ಸ್ವಾಮಿನಾಥನ್ ಆರ್.ಎನ್
ವೆಂಕಟೇಶ್ ಪ್ರಸಾದ್ ಆರ್
ದಿಲೀಪ್ ಕುಮಾರ್ ಆರ್
ಸಾವಿತ್ರಿ ಪಾರ್ಥಸಾರಥಿ
ನಾರಾಯಣ ರಾವ್ ಆರ್. ಎ
ಕಾವ್ಯ ಮತ್ತು ನವ್ಯಾ
ಪ್ರಜ್ವಲ್ ಬಿ.ಆರ್
ಸರಸ್ವತಿ ಕೆ
ನಟರಾಜ ಬಿ.ಸಿ
ಅನಿಲ್ ಸೇಲಂ
ಗೋಪಿ ಬಿ.ಎನ್
ಪ್ರಭಾ ನಾಗರಾಜ್
ಭರತ್ ಶರ್ಮ
ಶಂಕರ ಪ್ರಸಾದ್ ಬಿ.ಆರ್
ರವಿಶಂಕರ್ ಆರ್.ಎಸ್
ಶಾರ್ವರಿ ಎಸ್ ವಾಸನ್

ರಾಮಮೂರ್ತಿ ಬಿ.ಸಿ
ಶ್ಯಾಮ್ ಜಿ.ವಿ
ಪ್ರಭು ಬಿ.ಆರ್
ಪ್ರಭಾಕರ್ ಎನ್
ಶ್ರೀನಿವಾಸ ಬಿ.ಎಸ್
ಪ್ರದೀಪ್ ಎಸ್
ರಾಜಲಕ್ಷ್ಮಿ ಆರ್
ನರಸಿಂಹನ್
ವೆಂಕಟೇಶ್ ಆರ್. ಎಸ್
ಸೂರ್ಯಕುಮಾರಿ ಎಚ್ ಪಿ
ಪದ್ಮಿನಿ ಎನ್
ನಾಗರತ್ನ
ಜಗನ್ನಾಥ್ ಟಿ.ಪಿ
ರವಿ ಕುಮಾರ್ ಆರ್. ಎಸ್
ನಳಿನಿ ಜಯರಾಮ್
ಸುಬ್ಬ ಲಕ್ಷ್ಮಿ ಬಿ.ಕೆ
ರವಿಶಂಕರ್ ಕೆ.ವಿ
ಶಾಂತಾ ಕುಮಾರಿ
ಗಣೇಶ್ ರಾಮ್ ಎ.ವಿ
ನಾಗೇಶ
ನೇತ್ರಾನಂದ ಟಿ.ಆರ್
ನಾರಾಯಣಸ್ವಾಮಿ ಕೆ.ಎಸ್
ಲಕ್ಷ್ಮೀಕಾಂತ ಕೆ.ವಿ
ವಿಶ್ವನಾಥ್ ಎಸ್
ರಮೇಶ್ ಎಂ.ಎಸ್
ರವೀಂದ್ರ ರಾಮ್
ಶ್ಯಾಮಸುಂದರ್ ಆರ್.ಎ
ಸುಂದರ್ ಪಿ
ನಾಗರಾಜು ಕೆ.ಟಿ
ಕುಮಾರ್ ಆರ್. ಎನ್
ವೆಂಕಟಸುಬ್ಬರಾವ್ ಆರ್. ಎನ್
ಮುರಳೀಧರ್ ಆರ್. ಎನ್
ಶಶಿಧರ್ ಎಚ್. ಕೆ
ಶ್ರೀನಿವಾಸನ್ ಎಸ್. ಟಿ
ಈಶ್ವರನ್ ಎ
ಜನಾರ್ದನ್ ಪಿ.ಎಸ್
ಪದ್ಮನಾಭ
ಕರ್ನಲ್ ರಾಜನ್ ವಿಜಿ
ಶ್ರೀನಿವಾಸ ಕೆ.ಜಿ

ಕುಪ್ಪುಸ್ವಾಮಿ
ಸೇತುರಾಮ್ ಕೆಜಿ
ಅಕ್ಷಯ್ ಕಶ್ಯಪ್
ಮಂಜುನಾಥ್ ಆರ್. ಎನ್
ತ್ರಿವೇಣಿ
ವೇಣುಗೋಪಾಲ್
ಅನಂತ್ ಎಚ್ ಜಿ
ಶ್ರೀನಿವಾಸ ಆನಂದ್
ಮಹೇಶ್ ಆರ್ ಎಸ್
ಜಯರಾಮ್ ಎಸ್
ಗೋವಿಂದರಾವ್ ಬಿಎಸ್
ಶ್ಯಾಮಸುಂದರ್ ಬಿಎಸ್
ಕೃಷ್ಣಸ್ವಾಮಿ ಛಾಯಾಪತಿ
ನಾಗರಾಜನ್ ಎಸ್
ಗೋವಿಂದರಾಜು ಕೆ.ಎನ್
ರಮೇಶ್ ಬಾಬು ಎಸ್
ವಿಜಯ್ ದೇವ್ ಎಸ್
ಸತೀಶ್ ವಿ
ಅಜಯ್ ಕುಮಾರ್ ಎನ್
ಹರ್ಷ ನಾಗರಾಜು
ಲಕ್ಷ್ಮಿ ದೇವಿ ಜಿ.ಪಿ
ಜ್ಯೋತಿ ಸೂರ್ಯನಾರಾಯಣ
ಶಶಿಕಲಾ ಪಿ
ಶ್ರೀಕಾಂತ್ ಆರ್. ಎ
ರವಿ ಸರ್ಜಾಪುರ
ಉಮಾ ಜಯರಾಮ್
ಬಾಲಸುಬ್ರಮಣ್ಯ ಜಿ.ವಿ
ವರ್ಷಾ ವೆಂಕಟೇಶ್
ಲಕ್ಷ್ಮೀಕಾಂತ ಕೆ.ವಿ
ಶ್ರೀಕಾಂತ್ ಆರ್. ಎ
ಸುಬ್ರಹ್ಮಣ್ಯ ಜಿ
ಉಷಾ ರಂಗನಾಥ್
ಶ್ರೀನಿವಾಸ ಆರ್
ರವಿಶಂಕರ್ ಆರ್. ಪಿ
ಅಶ್ವತ್ಥ ರಾಜರಾವ್
ಅರ್ಜುನ್ ಡಿ
ಧಾತ್ರಿ ಆರ್. ಪ್ರಸಾದ್
ರಾಹುಲ್ ಶ್ರೀನಿವಾಸ್
ವೀಣಾ ಪ್ರಸಾದ್ ಪಾರ್ವತಿ

| | | |
|---|---|---|
| ವಿಜಯಸಾರಥಿ | ರಾಮ್ ಕುಮಾರ್ ಟಿ.ಎಸ್ | ಮಂಜುಳಾ ಟಿ.ಆರ್ |
| ಡಾ. ಸ್ವಾಮಿನಾಥ್ ಜಿ. | ವೇಣುಗೋಪಾಲ್ | ಪಾರ್ವತಿ ರಾಧಾಕೃಷ |
| ಗಣಪತಿ ವೈ. ಆರ್ | ಶಾಂತಲಕ್ಷ್ಮಿ/ಸುಬ್ರಮಣಿ ಕೆ | ನಾಗರಾಜ ಡಿ.ಕೆ |
| ರಮೇಶ್ ಟಿ. ಎಸ್ | ಪ್ರಭಾವತಿ ರಾಮಕೃಷ್ಣ | ಡಾ. ರಮಾದೇವಿ ಎಸ್ |
| ಸುಮಾ ಪಿ ಸರಾಫ್ | ಉಷಾ ದೇವಿ | ಶ್ರೀನಿವಾಸನ್ ಕೆ.ಎಸ್ |
| ರಾಮ ನರಸಿಂಹ ರಾವ್ | ಸೂರ್ಯಪ್ರಕಾಶ್ ಆರ್.ಎನ್ | ಶ್ರೀನಾಥ್ ಎಲ್ |
| ಅಂಜನ್‌ಕುಮಾರ್ | ಸುನಂದಮ್ಮ | ನಾಗರತ್ನ |
| ದಾನಪ್ಪ ಮತ್ತು ಅಮ್ಮಯಮ್ಮ ಕುಟುಂಬ | ಆರ್ಯನ್ ವಿ | ನಾಗರಾಜ್ ಕೆ.ಜಿ |
| ದೀಪಿಕಾ ರಾಜೇಶ್ | ನಾಗರತ್ನ ಶ್ರೀಧರ್ | ಗಾಯತ್ರಿ ಸತ್ಯನಾರಾಯಣ |
| ವೀಣಾ ವೆಂಕಟೇಶ್ | ಸುಬ್ರಮಣ್ಯ ವಿ | ಗಾಯತ್ರಿ ಶೇಷಾಚಲ |
| ಶ್ರೀ ಶ್ರೀನಿವಾಸ | ನರಸು ರಾಮಚಂದ್ರ | ಮಂಜುನಾರಾಯಣ ಕೆ |
| ಸತ್ಯನಾರಾಯಣ ಎಸ್ | ಮನೋಜ್ | ಅನಂತ ಕೆ.ಎಸ್ |
| ಅರುಣ್ ಕೆ.ಎಸ್ | ಶಶಿಧರ್ ಎಚ್ ಕೆ | ಶರ್ಮ ಕೆ.ಬಿ.ಎಸ್ |
| ಸೋಮಸುಂದರ ಎಸ್ | ಗುಂಡಪ್ಪ ಕೆ | ಅರುಣ್ ವಿ |
| ಇಂದಿರಾ ಜಿ | ಸುಮಾ ಗೋಪಾಲ್ | ವೆಂಕಟಸುಬ್ಬಯ್ಯ ಕೆ |
| ಶೇಖರ್ ಕೆ. ಸಿ | ಚಂದ್ರಶೇಖರ್ ಕೆ | ಮುರಳಿಕೃಷ್ಣ ಸಿ |
| ಚಂದ್ರಶೇಖರ್ ಬಿ.ಎಸ್ | ರೇವತಿ ಚಂದ್ರಶೇಖರ್ | ಗಾಯತ್ರಿದೇವಿ ಡಿ. ಎನ್ |
| ಪ್ರಸಾದ್ ಎ. ಆರ್ | ರಾಜಣ್ಣ | ಗಣೇಶ ಶ್ರೀಧರ್ |
| ಎಸ್. ಸಿ. ಶ್ರೀನಿವಾಸ | ಬಿ. ಸುಬ್ರಹ್ಮಣ್ಯಂ | ಎಸ್. ನಳಿನಿ |
| ಮಂಗಳಾ ಬಿ. ಆರ್ | ಲೇಟ್ ಪದ್ಮಾವತಿ & ಸೂರಪ್ಪ (ಕುಟುಂಬ–ವಡೆ ಪ್ರಸಾದ) | |

## ಯುಗಾದಿ ಹಬ್ಬ ಮತ್ತು ವರ್ಷದ ತೊಡಗು

ಚಾಂದ್ರಮಾನ ಚೈತ್ರಮಾಸದ ಮೊದಲು ದಿನವೇ ಯುಗಾದಿ. ಒಂದು ಯುಗಾದಿಯಿಂದ ಇನ್ನೊಂದು ಯುಗಾದಿಯವರೆಗೆ ಒಂದು ವರ್ಷವೆಂದು ಹಿಂದೂಗಳೆಲ್ಲರೂ ನಂಬುತ್ತಾರೆ. ಒಂದೊಂದು ವರ್ಷಕ್ಕೂ ಒಂದೊಂದು ಹೆಸರಿದೆ, ಒಟ್ಟು 60 ಸಂವತ್ಸರಗಳಿವೆ. ಪ್ರಭವ, ವಿಭವ ಇತ್ಯಾದಿ. ಕೊನೆಯ ಸಂವತ್ಸರ ಅಕ್ಷಯ.

ಯುಗಾದಿಯ ದಿನ ಬೆಳಿಗ್ಗೆ ಬೇಗ ಎದ್ದು ಅಭ್ಯಂಜನ ಸ್ನಾನ ಮಾಡಿ, ಮನೆಯ ಒಳಗೆ ಮತ್ತು ಹೊರಗೆ ಸಾರಿಸಿ, ರಂಗವಲ್ಲಿಯಿಂದ ಅಲಂಕರಿಸಿ, ತೋರಣ ಕಟ್ಟಿ ಬಾಗಿಲುಗಳಿಗೆ ಮಾವಿನೆಲೆ, ಬೇವಿನೆಲೆಗಳನ್ನು ಸಿಕ್ಕಿಸಿ, ಎಲ್ಲರೂ ಹೊಸ ಬಟ್ಟೆ ಧರಿಸುವರು. ಬೇವು–ಬೆಲ್ಲವನ್ನು ತಿನ್ನುತ್ತಾರೆ.

**"ಶತಾಯುರ್ವಜ್ರದೇಹಾಯ ಸರ್ವ ಸಂಪತ್ಕರಾಯ ಚ। ಸರ್ವಾರಿಷ್ಟ ವಿನಾಶಾಯ ನಿಂಬಕಂ ದಳ ಭಕ್ಷಣಂ"॥**

ಎಂಬ ಮಂತ್ರವನ್ನು ಹೇಳಿಕೊಂಡು ಬೇವು–ಬೆಲ್ಲ ತಿನ್ನಬೇಕು. ಸುಖ–ದುಃಖ ಎರಡೂ ಬರುತ್ತವೆ, ಎರಡನ್ನೂ ಸಮಾನ ಮನೋಧರ್ಮದಿಂದ ಸ್ವೀಕರಿಸಬೇಕೆಂದು ಇದರ ಸಂಕೇತ. ಆ ದಿನದ ಭೋಜನದಲ್ಲಿ ಒಬ್ಬಟ್ಟು ಶೋಭಿಸುತ್ತದೆ.

ಅಂದಿನಿಂದ 9 ದಿನಗಳವರೆಗೂ, ಅಂದರೆ ಶ್ರೀರಾಮನವಮಿಯವರೆಗೂ, ರಾಮಾಯಣ ಪಾರಾಯಣ, ಸಂಗೀತೋತ್ಸವಗಳು ನಡೆಯತ್ತವೆ.

ಯುಗಾದಿಯ ಮಾರನೆಯ ದಿನವನ್ನು ವರ್ಷದ ತೊಡಗು ಎನ್ನುವರು. ಆ ದಿನ ಏನು ಮಾಡಿದರೂ ಅದನ್ನೆ ಆ ವರ್ಷ ಪೂರ್ತಿ ಮಾಡುತ್ತಿರಬೇಕು. ಆದ್ದರಿಂದಲೇ ಆ ದಿನ ಒಳ್ಳೆಯ ಮಾತು, ಒಳ್ಳೆಯ ಊಟ, ಒಳ್ಳೆಯ ನಡತೆ, ಒಳ್ಳೆಯ ಕೆಲಸ ಇವುಗಳು ಮುಖ್ಯ.

**ಎ.ಎನ್.ಲಕ್ಷ್ಮೀದೇವಿ**
**25489293**

# ಜಿ. ಪಿ. ಲಕ್ಷ್ಮೀದೇವಿ – ಸಂಕ್ಷಿಪ್ತ ಪರಿಚಯ



ಶ್ರೀಮತಿ ಜಿ. ಪಿ. ಲಕ್ಷ್ಮೀದೇವಿ ಅವರು ರಾಜಾಪುರ ಗೋಪಾಲರಾವ್ ಮತ್ತು ಶಕುಂತಳಮ್ಮನವರ ಹಿರಿಯ ಪುತ್ರಿ. ಶಾಲಾ ದಿನಗಳಲ್ಲಿ ಓದಿನೊಂದಿಗೆ ಪುರಾಣ ಪ್ರವಚನಗಳನ್ನು ಆಸಕ್ತಿ ಯಿಂದ ಆಲಿಸುತ್ತಾ ಬೆಳೆದರು. ಹಾಗೆಯೇ ಆ ಕಾಲದ ಇಂಟರ್ ಮೀಡಿಯೇಟ್ ಶಿಕ್ಷಣ ಮುಗಿಸಿದರು. ಬಾಲ್ಯದಿಂದಲೂ ತನ್ನೊಂದಿಗೇ ಬೆಳೆದ, ತನ್ನ ಓದಿಗೆ ಸಹಕರಿಸಿದ ಸಂಬಂಧಿ ಶ್ರೀ ಜಿ.ಎಸ್. ಪದ್ಮನಾಭಯ್ಯನವರನ್ನು ಮದುವೆಯಾದರು. ಕಾಲಕಳೆದಂತೆ ನಾಲ್ಕು ಮಕ್ಕಳ ತಾಯಿಯಾಗಿ ಸಾಂಸಾರಿಕ ಜವಾಬ್ದಾರಿ ಹೊತ್ತರು.

ನಾಲ್ಕು ಮಕ್ಕಳಾದರೂ ಇವರ ಕಲಿಯುವಿಕೆಯ ಆಸಕ್ತಿ ಕುಂದಲಿಲ್ಲ. ಸಾಂಸಾರಿಕ ಜೀವನ ಈಕೆಯಲ್ಲಿದ್ದ ಕಲಿಯುವಿಕೆಯ ಉತ್ಸಾಹಕ್ಕೆ ಅಡ್ಡಬರಲಿಲ್ಲ. ದಿವಂಗತ ಶ್ರೀ ಆರ್. ಶಂಕರನಾರಾಯಣ್ ಅವರು ಸ್ಥಾಪಿಸಿದ "ಕಾವ್ಯ ಪ್ರಚಾರ ಮಂಡಲಿ"ಯ ಆಶ್ರಯದಲ್ಲಿ ಕಾವ್ಯವಾಚನ ಕಲಿತು ಕ್ರಮೇಣ ತಮ್ಮನ್ನು ಗಮಕಿ ಎಂದು ಗುರುತಿಸಿಕೊಂಡರು. ಕನ್ನಡ ಸಾಹಿತ್ಯ ಪರಿಷತ್ ನಡೆಸುತ್ತಿದ್ದ ಕನ್ನಡ ಭಾಷೆಯ ಪ್ರವೇಶ, ಪ್ರೌಢ ಹಾಗೂ ರನ್ನ ಪರೀಕ್ಷೆಗಳಲ್ಲೂ ತೇರ್ಗಡೆಯಾದರು. ಇತ್ತೀಚೆಗೆ ನಮ್ಮನ್ನಗಲಿದ ರಾಮಚಂದ್ರ ಶರ್ಮ ತ್ಯಾಗಿಲಿ ಅವರಿಂದ ಸಂಸ್ಕೃತವನ್ನು ಕಲಿತರು. ಶೃಂಗೇರಿಯ "ಸುರಸರಸ್ವತೀ ಸಭಾ" ವತಿಯಿಂದ ನಡೆಯುತ್ತಿದ್ದ ಸಂಸ್ಕೃತದ ಮೂರೂ ಹಂತದ ಪರೀಕ್ಷೆಗಳಲ್ಲಿ ನಿರಾಯಾಸವಾಗಿ ತೇರ್ಗಡೆಯಾದರು. ಹಾವೇರಿ ಪ್ರಹ್ಲಾದಾಚಾರ್ ಅವರಿಂದ ದೇವರನಾಮ, ಭಾವಗೀತೆ ಮತ್ತು ಕನ್ನಡಗೀತೆಗಳನ್ನು ಕಲಿಯುತ್ತಾ ಮುನ್ನಡೆದರು.

ವಿಶೇಷವೆಂದರೆ, ತನ್ನ ಜೊತೆಯಲ್ಲೇ ಸಂಸ್ಕೃತ, ಕಾವ್ಯವಾಚನ, ದೇವರನಾಮ, ಭಾವಗೀತೆ ಹಾಗೂ ಕನ್ನಡಗೀತೆಗಳನ್ನು ಕಲಿತ ಬಾಲ್ಯಗೆಳತಿ ಶ್ರೀಮತಿ ಮಣಿ ಸೋಮಶೇಖರ್ ಅವರೊಂದಿಗೆ ಸಂಗೀತ ಹಾಗೂ ಗಮಕ ವಾಚನ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದರು. ಉತ್ತಮ ಸಿರಿಕಂಠ ಹೊಂದಿದ್ದ ಇವರಿಬ್ಬರೂ ಸಭೆ–ಸಮಾರಂಭಗಳಲ್ಲಿ ಶೋತೃಗಳು ತಲೆದೂಗುವಂತೆ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಆ ಕಾಲಘಟ್ಟದಲ್ಲಿ "ಲಕ್ಷ್ಮೀ ಮತ್ತು ಮಣಿ" ಅವರಿಂದ ಕಾರ್ಯಕ್ರಮವೆಂದರೆ, ಭಾಗವಹಿಸುವ ಶೋತೃಗಳಿಗೆ ರಸದೌತಣ ಗ್ಯಾರಂಟಿ ಎಂಬ ಮಾತು ಚಾಲ್ತಿಯಲ್ಲಿತ್ತು. ಮುಂದೆ ಇವರಿಬ್ಬರ ಗೆಳೆತನದ ಅದೆಷ್ಟು ಗಾಢವಾಗಿತ್ತೆಂದರೆ, ಇಬ್ಬರೂ ಜೊತೆಯಾಗಿ ಮೈಸೂರು ವಿಶ್ವವಿದ್ಯಾನಿಲಯವು ನಡೆಸುತ್ತಿದ್ದ ಅಂಚೆ ತೆರಪಿನ ಶಿಕ್ಷಣದ ಮೂಲಕ ಕನ್ನಡ ಎಂ.ಎ ಸ್ನಾತಕೋತ್ತರ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಪದವಿ ಪಡೆದರು. ತಮ್ಮಿಬ್ಬರ ಗೆಳೆತನದ ಗುರುತಾಗಿ ಮಣಿ ಸೋಮಶೇಖರ್ ಅವರ ಮಗಳನ್ನೇ ಲಕ್ಷ್ಮೀದೇವಿ ಅವರು ತನ್ನ ಮೊದಲ ಸೊಸೆಯಾಗಿ ಮನೆ ತುಂಬಿಸಿಕೊಂಡರು. ಈ ರೀತಿಯಲ್ಲಿ ಬಾಲ್ಯಗೆಳತಿಯರಾಗಿ ಬೆಳೆದ ಅವರಿಬ್ಬರೂ, ಕ್ರಮೇಣ ಸಾಹಿತ್ಯ ಕಲಿಯುವ ವಿದ್ಯಾರ್ಥಿನಿಯರಾಗಿ, ಕಲಾವಿದೆಯರಾಗಿ, ಕೊನೆಗೆ ಪರಸ್ಪರ ಬೀಗರೂ ಅಗಿಬಿಟ್ಟರು.

ಇದು ಇಷ್ಟಕ್ಕೇ ನಿಲ್ಲಲಿಲ್ಲ. ಲಕ್ಷ್ಮೀದೇವಿಯವರ ಮೇಲೆ ಭಗವಂತನ ಕೃಪೆ ಮುಂದುವರೆಯಿತು. ಕಾಲೇಜಿನಲ್ಲಿ ಓದುತ್ತಿದ್ದ ತನ್ನ ಎರಡನೇ ಮಗನೊಂದಿಗೆ ಕನ್ನಡ ಟೈಪಿಂಗ್ ಕಲಿತು, ಪರೀಕ್ಷೆಯಲ್ಲಿ ಮಗನನ್ನು ಹಿಂದಿಕ್ಕಿ ತಾನು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರು. ಗಮಕ ಕಲೆಯನ್ನು ಪ್ರಚಾರ ಮಾಡುವ ಸಲುವಾಗಿ "ಗಮಕ ಶಿಕ್ಷಣ" ಕಲಿಸಲು ಇದ್ದ ಅರ್ಹತಾ ಪರೀಕ್ಷೆಯಲ್ಲೂ ಭಾಗಿಯಾಗಿ ಮೊದಲ ದರ್ಜೆಯಲ್ಲೇ ಉತ್ತೀರ್ಣರಾಗಿ, ಆಸಕ್ತರಿಗೆ ಗಮಕವನ್ನೂ ಸಹ ಕಲಿಸತೊಡಗಿದರು.

ಬೆಂಗಳೂರು ಆಕಾಶವಾಣಿಯಲ್ಲೂ ಸಹ ಆಗಾಗ್ಗೆ ಕಾವ್ಯವಾಚನ ಮಾಡುತ್ತಾ, ಭಾವಗೀತೆಗಳನ್ನು ಹಾಡುತ್ತಾ ಶ್ರೋತೃಗಳನ್ನು ರಂಜಿಸತೊಡಗಿದರು. ಆಕಾಶವಾಣಿಯ ರೇಡಿಯೋ ನಾಟಕಗಳಲ್ಲಿಯೂ ಸಹ ಭಾಗಿಯಾಗಿ, ಮಕ್ಕಳ ನಾಟಕಗಳನ್ನು ನಿರ್ದೇಶಿಸುತ್ತಾ, ಒಮ್ಮೊಮ್ಮೆ ಪಾತ್ರಗಳಿಗೆ ಕಂಠದಾನ ಮಾಡುತ್ತಿದ್ದರು.

ಕುವೆಂಪು ಅವರ "ಶ್ರೀರಾಮಾಯಣ ದರ್ಶನಂ" ಮಹಾಕಾವ್ಯದ "ಸಾಗರೋಲ್ಲಂಘನಂ" ಭಾಗವನ್ನು ಕುವೆಂಪು ಅವರ ಮುಂದೆಯೇ ಗಮಕ ರೀತಿಯಲ್ಲಿ ಹಾಡಿ

ಅವರಿಂದಲೇ ಪ್ರಶಂಸೆ ಪಡೆದರು. ಹಾಗೆಯೇ ಧರ್ಮಸ್ಥಳದ ಶ್ರೀ ವೀರೇಂದ್ರಹೆಗ್ಗಡೆ ಅವರ ಸಮ್ಮುಖದಲ್ಲಿ ಕೆಲವು ದೇವರನಾಮಗಳನ್ನು ಹಾಗೂ ಭಾವಗೀತೆಗಳನ್ನು ಹಾಡಿ ಅವರಿಂದಲೂ ಮನ್ನಣೆ ಗಳಿಸಿದರು.

"ವಿಷ್ಣು ಸಹಸ್ರನಾಮ ಸ್ತೋತ್ರಂ" ನಲ್ಲಿ ಶ್ರೀ ವಿಷ್ಣುವನ್ನು ಸಂಸ್ಕೃತದಲ್ಲಿ ಸಹಸ್ರನಾಮಗಳಿಂದ ಹೊಗಳಿ ಕರೆದಿರುವುದು ಸರಿಯಷ್ಟೇ. ಲಕ್ಷ್ಮೀದೇವಿಯವರು ಆ ಸಹಸ್ರನಾಮಗಳ ಪ್ರತಿಯೊಂದು ನಾಮವನ್ನೂಅಥವಾ ಹೆಸರನ್ನೂ ಕನ್ನಡದಲ್ಲಿ ವಿವರವಾಗಿ ಬರೆದಿದ್ದಷ್ಟೇ ಅಲ್ಲದೆ, ಅದನ್ನು "ಶ್ರೀ ವಿಷ್ಣುಸಹಸ್ರನಾಮ ಸ್ತೋತ್ರಂ ಟೀಕಾತಾತ್ಪರ್ಯ ಸಹಿತ" ಎಂಬ ಪುಸ್ತಕವನ್ನು ಪ್ರಕಟಿಸಿದರು. ಇದು ಶ್ರೀಮತಿಯವರ ಎಲ್ಲಾ ಸಾಧನೆಗಳಿಗೆ ಕಳಶವಿಟ್ಟಂತಿದೆ. ಇವರ ಈ ಸಾಹಸವನ್ನು ನಿರಂತರವಾಗಿ ಬೆಂಬಲಿಸಿ, ಪುಸ್ತಕ ರೂಪದಲ್ಲಿ ಪ್ರಕಟವಾಗಲು ಸಹಕರಿಸಿದವರೇ ಲಕ್ಷ್ಮೀದೇವಿ ಅವರ ಜೀವದ ಗೆಳೆಯ ಹಾಗೂ ಪತಿಯಾದ ಶ್ರೀ ಜಿ.ಎಸ್. ಪದ್ಮನಾಭಯ್ಯನವರು.

ಶ್ರೀ ಡಿ.ವಿ.ಜಿ. ಅವರ "ಮಂಕುತಿಮ್ಮನಕಗ್ಗ"ದಲ್ಲಿನ ಆಯ್ದ ಕಗ್ಗಗಳನ್ನು ತನ್ನದೇ ಆದ ಸರಳ ರೀತಿಯಲ್ಲಿ ವ್ಯಾಖ್ಯಾನಿಸುವುದು ಹಾಗೂ ಅದನ್ನು ಆಸಕ್ತರೊಂದಿಗೆ ಹಂಚಿಕೊಳ್ಳುವುದು ಒಂದೆಡೆಯಾದರೆ, ಇಂದಿಗೂ ಕೀರ್ತನೆಗಳನ್ನು ಮತ್ತು ದಾಸರ ಪದಗಳನ್ನು ಹಾಡಿಕೊಳ್ಳುವುದು ಶ್ರೀಮತಿಯುವರ ಹವ್ಯಾಸಗಳಾಗಿವೆ.

ಈಗ 'ದಿ ಹಿಂದೂ' ದಿನಪತ್ರಿಕೆಯ FAITH ಕಾಲಮ್ಮಿನಡಿ ಪ್ರಕಟವಾಗುತ್ತಿರುವ ಆಯ್ದ ಲೇಖನಗಳ ಕನ್ನಡಾನುವಾದ ಮಾಡುವಲ್ಲಿ ನಿರತರಾಗಿರುವ ಲಕ್ಷ್ಮೀದೇವಿ, ಮುಂಬರುವ ಸಂಕ್ರಾಂತಿ ಹಬ್ಬದ ಸಮಯದಲ್ಲಿ ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲಿದ್ದಾರೆ.

ಈಗ ಎಂಭತ್ತು ದಶಕ ದಾಟಿ, ಎರಡು ವರ್ಷಗಳಾಗಿದ್ದರೂ ಲಕ್ಷ್ಮೀದೇವಿಯವರಲ್ಲಿ ಸಾಹಿತ್ಯ ಓದುವ ಹಾಗೂ ಬರೆಯುವ ಆಸಕ್ತಿ ನಿರಂತರವಾಗಿದೆ. ಇತ್ತೀಚೆಗೆ ಶ್ರೀರಾಮನ ಭಕ್ತನಾದ ಹನುಮಂತನ ಜೀವಮಾನದಲ್ಲಿ ನಡೆದ ಹಲವಾರು ವಿಶೇಷ ಪ್ರಸಂಗಗಳನ್ನು, ಕುತೂಹಲಕರ ಘಟನೆಗಳನ್ನು "ಇವನೇ ನಮ್ಮ ಹನುಮ" ಎಂಬ ಕಿರುಹೊತ್ತಿಗೆಯಲ್ಲಿ ದಾಖಲಿಸಿ ಪ್ರಕಟಿಸಿದ್ದಾರೆ.

ಸಂಘವು ಶ್ರೀಮತಿಯವರಿಗೆ ಇನ್ನೂ ಹಲವಾರು ವರ್ಷಗಳ ಕ್ರಿಯಾಶೀಲ ಜೀವನವನ್ನು ಹಾರೈಸುತ್ತದೆ.

# ನಾಗಾರಾಧನೆ ಮತ್ತು ಸ್ತ್ರೀಯರಿಗೆ ಗೌರವ-ಸಾಮ್ಯತೆ

ಕಿತ್ತಿಗಾನಹಳ್ಳಿ ಶ್ರೀ ನಾಗೇಶ್ವರ ಕ್ಷೇತ್ರದಲ್ಲಿ ಸುಮಾರು ಏಳು ಶತಮಾನಗಳ ಹಿಂದೆ ನಡೆದ ಒಂದು ಅಚಾತುರ್ಯ ಘಟನೆಯಲ್ಲಿ ಸರ್ಪರೂಪದ ಶಿಶುವು ಮೃತಪಟ್ಟಿತು. ಅಂದಿನಿಂದ ಪಾಲ್ಗುಣ ಮಾಸದ ಪಂಚಮಿಯ ದಿನ ನಾಗಾರಾಧನೆ ಪ್ರಾರಂಭವಾಯಿತು ಎಂಬುದು ಪ್ರತೀತಿ. ಇದರಿಂದ ಕೌಂಡಿನ್ಯ ಗೋತ್ರದವರಿಗೆ ಸರ್ಪದೋಷವು ಕಾಡದಿರಲಿ ಎಂದು ಈ ಆಚರಣೆಯು ನಡೆದುಕೊಂಡು ಬಂದಿದೆ.

ಈಗಿನ ಕಾಲದಲ್ಲಿ ಸುಮಾರು ಜನರಿಗೆ ಈ ಸರ್ಪದೋಷವಿರುತ್ತದೆ. ಸರ್ಪದೋಷವು ಸರ್ಪವನ್ನು ಕೊಂದದ್ದರಿಂದ ಬರುತ್ತದೆ ಎಂದು ನಂಬಿಕೆಯಿದೆ. ಆದರೆ ಸ್ತ್ರೀಯರನ್ನು ನೋಯಿಸಿದರೆ ಕೂಡ ಸರ್ಪದೋಷ ಕಾಡುವುದು ಎಂಬುದು ಕೆಲವು ಪಂಡಿತರ ಅಭಿಪ್ರಾಯ. ವಿಜ್ಞಾನವನ್ನೇ ನಂಬಿದವರಿಗೆ ಇದು ಮೂಢನಂಬಿಕೆ ಅನ್ನಿಸಬಹುದು. ಇದು ಏನೇ ಇರಲಿ ಸಾಮಾನ್ಯ ತಿಳಿವಳಿಕೆ ಏನೆಂದರೆ ನಾವು ಯಾರಿಗಾದರೂ ಕಾಯ, ವಾಚಾ ಅಥವಾ ಮನಸಾ ನೋಯಿಸಿದರೆ ಅದರ ದುಷ್ಫಲವನ್ನು ಅನುಭವಿಸಬೇಕಾಗುತ್ತದೆ. ಇದನ್ನು ನಿವಾರಣೆ ಮಾಡಿಕೊಳ್ಳ ಬೇಕಾದರೆ ಕೆಲವು ಪರಿಹಾರಗಳನ್ನು ಮಾಡಬೇಕಾಗುತ್ತದೆ ಎಂಬುದು ಶಾಸ್ತ್ರ ತಿಳಿದವರ ಅಭಿಮತ.

ನಾವು ಇತರರ ಅಭಿಪ್ರಾಯಗಳನ್ನು ಗೌರವಿಸೋಣ. ಸೌಹಾರ್ದಯುತ ಚಿಂತನೆಯಿಂದ ವಿಚಾರ ಮಾಡೋಣ. ನಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳೋಣ. ನೆಮ್ಮದಿಯ ಜೀವನವನ್ನು ನಡೆಸಲು ಪ್ರಯತ್ನಿಸೋಣ.

**ಸಂಪಾದಕರು**

## ಜನನ

ಸದಸ್ಯರಾದ ಶ್ರೀಮತಿ ಪದ್ಮಾ ಜಗನ್ನಾಥ್ ಮತ್ತು ಶ್ರೀ ಟಿ.ಪಿ.ಜಗನ್ನಾಥರ ಮಗನಾದ ಶ್ರೀ ಟಿ.ಜೆ.ರಘುರಾಮ್ ಮತ್ತು ಶ್ರೀಮತಿ ಸಮನ್ವಿತ ದಂಪತಿಗಳಿಗೆ 26.3.2022ರಂದು ಬೆಂಗಳೂರಿನಲ್ಲಿ ಹೆಣ್ಣು ಮಗು ಜನನವಾಯಿತು.

ಶಿಶುವಿಗೆ ಸಂಘದ ಶುಭ ಹಾರೈಕೆಗಳು.

# ನಿಷ್ಕಾಮ ಕರ್ಮದ ಫಲ

ಬಡ ಕುಟುಂಬದ ಬಾಲಕನೊಬ್ಬ ಮನೆ ಮನೆಗೆ ತೆರಳಿ ಸಾಮಾನುಗಳನ್ನು ಮಾರುತ್ತಿದ್ದ. ಒಂದು ದಿನ ಎಷ್ಟು ತಿರುಗಿದರೂ ಯಾರೂ ಸಾಮಾನು ಕೊಳ್ಳಲಿಲ್ಲ. ತಡೆದುಕೊಳ್ಳಲಾರದಷ್ಟು ಹಸಿವು. ಕಿಸೆಯಲ್ಲಿ ತಡಕಾಡಿದರೂ ಒಂದು ಕಾಸೂ ಸಿಗಲಿಲ್ಲ. ಯಾವುದಾದರೂ ಮನೆಯಲ್ಲಿ ತಂಗಳಾದರೂ ಸಿಗಬಹುದೇ ಎಂದು ನೋಡತೊಡಗಿದ. ಅಷ್ಟರಲ್ಲೇ ಒಂದು ಮನೆಯಿಂದ ಹೊರಬಂದ ಮಹಿಳೆಗೆ ತಿನ್ನಲಿಕ್ಕೆ ಏನಾದರೂ ಕೇಳಬೇಕೆನಿಸಿದರೂ ದಾಕ್ಷಿಣ್ಯವೆನಿಸಿ "ಕುಡಿಯಲು ನೀರು ಬೇಕಾಗಿತ್ತು" ಎಂದ. ಅವನ ಒಣಗಿದ ಮುಖ ನೋಡಿ ಅವಳು ಒಳಗೆ ಹೋಗಿ ದೊಡ್ಡ ಲೋಟದಲ್ಲಿ ಹಾಲನ್ನು ತಂದು ಅವನಿಗೆ ಕೊಟ್ಟಳು. ಹಾಲನ್ನು ಕುಡಿದ ಬಾಲಕ "ನೀವು ಈ ಹಾಲನ್ನು ಕೊಂಡು ತಂದಿರುತ್ತೀರಿ. ನಾನು ನಿಮಗೆ ಎಷ್ಟು ಕೊಡಬೇಕಾಗಬಹುದು? ಸ್ವಲ್ಪ ವ್ಯಾಪಾರವಾದ ತಕ್ಷಣ ಮರಳಿ ಬರುವೆ" ಎಂದು ಹೇಳಿದ. ಮಗು, ನೀನು ನನಗೆ ಏನೂ ಕೊಡಬೇಕಾಗಿಲ್ಲ. ಹಸಿದವರಿಗೆ ನೀಡಿದ್ದಕ್ಕೆ ಪ್ರತಿಯಾಗಿ ಏನನ್ನೂ ಸ್ವೀಕರಿಸಬಾರದು ಎಂದು ನನ್ನ ತಾಯಿಯಿಂದ ಕಲಿತಿದ್ದೇನೆ ಎಂದಳು. ಅವಳಿಗೆ ಕೃತಜ್ಞತೆ ಸಲ್ಲಿಸಿ ಆ ಬಾಲಕ ಹೊರಟ. ಅವಳು ನೀಡಿದ ಒಂದು ಲೋಟ ಹಾಲು ಅವನಲ್ಲಿ ಮನುಷ್ಯತ್ವಕ್ಕೆ ಮಿಗಿಲಾಗಿ ಯಾವುದೂ ಇಲ್ಲವೆಂಬ ದೃಢನಂಬಿಕೆ ಬಿತ್ತಿತು.

ಮುಂದೆ ಅವನು ಪರಿಶ್ರಮದಿಂದ ಕಲಿತು ಪ್ರತಿಷ್ಠಿತ ಆಸ್ಪತ್ರೆಯೊಂದರ ಮುಖ್ಯ ವೈದ್ಯಾಧಿಕಾರಿಯಾದ. ಅದೊಂದು ದಿನ ರೋಗಿಗಳನ್ನು ನೋಡಲು ಆಸ್ಪತ್ರೆಯ ಓಣಿಗೆ ಹೋಗುವಾಗ ಹೊಸರೋಗಿಯ ಊರಿನ ಹೆಸರು ನೋಡುತ್ತಿದ್ದಂತೆ ಆ ದಿನ ಒಂದು ಲೋಟ ಹಾಲು ನೀಡಿ ತನ್ನ ಹಸಿವೆ ನಿವಾರಿಸಿದ ಮಹಿಳೆಯ ನೆನಪಾಯಿತು. ಹತ್ತಿರ ಹೋಗಿ ನೋಡಿದರೆ, ನೋವಿನಿಂದ ನರಳುತ್ತ, ಸಾವು ಬದುಕಿನ ನಡುವೆ ಹೋರಾಡುತ್ತಿದ್ದುದು ಆ ಮಹಿಳೆಯೇ! ಕೂಡಲೆ ಅವಳನ್ನು ತುರ್ತು ಚಿಕಿತ್ಸಾ ಘಟಕಕ್ಕೆ ಸ್ಥಳಾಂತರಿಸಿ ತಾನೇ ಸ್ವತಃ ಸೇವೆ ಮಾಡಿ ಅವಳನ್ನು ಉಳಿಸಲು ಸರ್ವಪ್ರಯತ್ನ ಮಾಡಿದ. ಕಡೆಗೂ ಜಯ ದೊರಕಿತು. ಅವಳು ಗುಣಮುಖಳಾದಳು. ಅಲ್ಲಿಂದ ಬಿಡುಗಡೆ ಹೊಂದುವ ದಿನ ನರ್ಸ್ ಬಂದು ಅವಳಿಗೆ ಲಕೋಟೆಯೊಂದನ್ನು ಕೊಟ್ಟಳು. "ಇಷ್ಟು ದಿನ ಆಸ್ಪತ್ರೆಯಲ್ಲಿದ್ದೇನೆ, ಎಷ್ಟು ಬಿಲ್ ಆಗಿದೆಯೋ, ಇದನ್ನು ತೀರಿಸಲು ಇನ್ನೂ ಎಷ್ಟು ದಿನ ದುಡಿಯಬೇಕಾಗಬಹುದೋ ಏನೋ" ಅಂತ ನಡಗುತ್ತಲೇ ಅದನ್ನು ತೆರೆದು ಓದಿದಳು. ಅದರಲ್ಲಿ ಬರೆದಿತ್ತು. "ನಿಮ್ಮ ಸಂಪೂರ್ಣ ಬಿಲ್ ಪಾವತಿಯಾಗಿದೆ. ಹಸಿದು ಕಂಗಾಲಾದ ಬಾಲಕನಿಗೆ ನೀಡಿದ ಒಂದು ಲೋಟದ ಅಮೃತ ಸಮಾನ ಹಾಲಿನ ಮುಂದೆ ಇದ್ಯಾವ ಲೆಕ್ಕ ಡಾ॥ ಹೂವರ್ಡ್ ಶೆಲ್ಲಿ." ಅವಳ ಕಣ್ಣಿನಿಂದ ಆನಂದಬಾಷ್ಪ ಉದುರಿದವು.

ಸತ್ಕರ್ಮ ಮಾಡುವ ಅವಕಾಶವೆಂಬುದು ಭಗವಂತನಿಂದ ಮಾನವನಿಗೆ ದೊರೆತ ಅತ್ಯಮೂಲ್ಯ ಕೊಡುಗೆ. ಅದನ್ನು ಉಪಯೋಗಿಸದಿದ್ದರೆ ಅದರ ಪರಿಣಾಮದಿಂದ ಮುಂಬರುವ ದೊಡ್ಡ ಫಲವನ್ನು ನಾವಾಗಿಯೇ ತಿರಸ್ಕರಿಸಿ, ವಂಚಿತರಾಗಿ ಉಳಿದು ಬಿಡಬೇಕಾಗುತ್ತದೆ. ಮಹಾಭಾರತದಲ್ಲಿ "ಈ ಭೂಮಿ ಯಾವುದರ ಮೇಲೆ ನಿಂತಿದೆ" ಎಂಬ ಯಕ್ಷ ಪ್ರಶ್ನೆಗೆ ಯುಧಿಷ್ಠಿರ ಕೊಟ್ಟ ಉತ್ತರ "ಧರ್ಮದ ಮೇಲೆ ನಿಂತಿದೆ" ಎಂಬುದು. ಎಷ್ಟು ಮಾರ್ಮಿಕವಲ್ಲವೇ? ಕವಿ ಸರ್ವಜ್ಞ "ಕೊಟ್ಟದ್ದು ಕೆಟ್ಟಿತೆನಬೇಡ ಮುಂದೆ ಕಟ್ಟಿರುವ ಬುತ್ತಿ" ಎಂದು ಸಾರಿದ್ದಾನೆ.

ನಿಷ್ಕಾಮ ಕರ್ಮವು ಅನಂತ ಫಲವನ್ನೀಯುತ್ತದೆ ಎಂಬ ಗೀತಾವಾಕ್ಯವನ್ನರಿತ ಜ್ಞಾನಿಗಳು ಅಂತಹ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಅದ್ಭುತಮಯವಾದ ಪರಮ ಪದವನ್ನು ಪಡೆಯುತ್ತಾರೆ.

**ಎಸ್.ಶ್ರೀನಿವಾಸಯ್ಯ**

**7899318098**

## ಹೊಸ ಸದಸ್ಯರು/ಪೋಷಕರು

### ಸದಸ್ಯರು

1. ಬಿ.ಎಸ್.ಗೋವಿಂದರಾಜ್
2. ವಿದ್ಯಾ ಪ್ರಸಾದ್
3. ಅರುಣ್ ಪ್ರಸಾದ್
4. ಅವಿನಾಶ್ ಮಂಜುನಾಥ್
5. ಅಶ್ವಿನಿ ವೆಂಕಟೇಶ್
6. ಎಸ್.ಚಂದ್ರಶೇಖರ್
7. ಆರ್.ಹೆಚ್.ವಿಶ್ವಾಸ್
8. ಧ್ಯಾನ್ ಸತೀಶ್
9. ಪದ್ಮಜಾ ಶ್ರೀನಿವಾಸನ್
10. ಎಂ.ಎಸ್.ಉಷಾರಾಣಿ
11. ಧೀಮಂತ್ ಕುಮಾರ್
12. ರೇಖಾ ರಮೇಶ್
13. ಎಸ್.ವಿ. ಗಾಯತ್ರಿ
14. ಎ.ಎಸ್.ವಿಜಯ್

**ಪೋಷಕರು**

1. ಎಂ.ಆರ್.ಸರಸ್ವತೀ
2. ಎ.ಎಸ್. ಅಶ್ವಿನ್

# ಅಭಿನಂದನೆಗಳು



ಸದಸ್ಯ ಆರ್.ಎಸ್.ಪ್ರಶಾಂತ್‌ರವರ ನಿರ್ದೇಶನದಲ್ಲಿ "Poor Boy and Bhagawan Buddha" ಎಂಬ ನಾಟಕವು ಹುಬ್ಬಳ್ಳಿಯ "Home Theatre Show" ನಲ್ಲಿ ಪ್ರದರ್ಶಿತವಾಯಿತು. ಈ ನಾಟಕಕ್ಕೆ ಶ್ರೀ ಆರ್.ಎಸ್.ಪ್ರಶಾಂತ್ ರವರಿಗೆ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ, ಅವರ ಪುತ್ರ ಎಸ್.ಪಿ.ಆದಿತ್ಯರಾಮ್‌ಗೆ ಅತ್ಯುತ್ತಮ ಛಾಯಾಗ್ರಾಹಕ ಹಾಗೂ ಗ್ರಾಫಿಕ್ಸ್ ಪ್ರಶಸ್ತಿ ಮತ್ತು ಅವರ ಪುತ್ರಿ ವಾಗ್ದೇವಿಗೆ ಅತ್ಯುತ್ತಮ ನಟನೆ ಪ್ರಶಸ್ತಿ ದೊರಕಿದೆ.



ಸಂಘದ ಹಿರಿಯ ಸದಸ್ಯ ಹಾಗೂ ಬೃಹಚ್ಚರಣ ಪತ್ರಿಕೆಯ ಮೊದಲ ಸಂಪಾದಕ ಶ್ರೀ ಕೆ.ಎಸ್.ಮಧುಸೂಧನ್ ಮತ್ತು ಸದಸ್ಯೆ ಶ್ರೀಮತಿ ಎನ್.ನಾಗರತ್ನರವರ ಮೊಮ್ಮಗಳು ಹಾಗೂ ಸದಸ್ಯ ಶ್ರೀ ಎಂ.ವಿ.ಎಸ್.ಶಶಾಂಕ್‌ರವರ ಮಗಳು ಕುಮಾರಿ ಸಾಚಿ ಆರ್ಯರವರ **"The Way The World is"** ಆಂಗ್ಲ ಕವನ ಸಂಕಲವನ್ನು ಬೆಂಗಳೂರಿನ ಸುಚಿತ್ರಾ ಫಿಲಮ್ ಸೊಸೈಟಿಯಲ್ಲಿ ಪ್ರೊಫೆಸರ್ ಸಿ.ಎನ್. ರಾಮಚಂದ್ರನ್ ಮತ್ತು ಡಾ॥ ಬಿ.ಎನ್.ಸುಮಿತ್ರಬಾಯಿರವರು ಬಿಡುಗಡೆ ಮಾಡಿದರು.



ಸಂಘದ ಪೋಷಕ ಹಾಗೂ ಲೆಕ್ಕ ಪರಿಶೋಧಕ ಶ್ರೀ ಬಿ.ಎನ್.ಜಿ.ಕುಮಾರ್ ಹಾಗೂ ಪತ್ನಿ ಶ್ರೀಮತಿ ಕಾವೇರಿರವರ ಪುತ್ರಿ ಕುಮಾರಿ ಸಾಯಿ ಸಿಂಧೂರರವರು ಎಮ್.ಎಸ್.ಸಿ. ಪದವಿಯ ಮನೋವಿಜ್ಞಾನ ಸಮಾಲೋಚನೆ ವಿಭಾಗದಲ್ಲಿ ಮೂರನೆ ರ‍್ಯಾಂಕ್ ಮತ್ತು ಚಿನ್ನದ ಪದಕವನ್ನು Indian Institute of Psychology and Researchನಿಂದ ಗಳಿಸಿದ್ದಾರೆ. ಅದಲ್ಲದೆ ಇವರು ಭರತನಾಟ್ಯ ಕಲಾವಿದೆ. ಭರತನಾಟ್ಯದಲ್ಲಿ ಉಜ್ವಲ ಭವಿಷ್ಯವಿರುವ ಇವರು ಹಲವಾರು ಸಂಘ ಸಂಸ್ಥೆಗಳಲ್ಲಿ ನೃತ್ಯ ಪದರ್ಶನ ನೀಡಿ ಮನ್ನಣೆ ಗಳಿಸಿದ್ದಾರೆ.



ಸದಸ್ಯ ಶ್ರೀ ಬಿ.ಇ.ಯೋಗೀಶ್ ರವರ ಪತ್ನಿ ಶ್ರೀಮತಿ ಸೌಮ್ಯಾ ಯೋಗೀಶ್‌ರವರ ಮೈಸೂರು ಶೈಲಿಯ ಚಿತ್ರಕಲಾ ಪ್ರದರ್ಶನವು ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ನಡೆಯಿತು. ಸಂಘವು ಶ್ರೀಮತಿ ಸೌಮ್ಯಾರವರನ್ನು ಅಭಿನಂದಿಸುತ್ತದೆ.




ಸದಸ್ಯ ಆರ್.ಎಸ್.ಪ್ರಶಾಂತ್‌ರವರ ಪುತ್ರ ಎಸ್.ಪಿ.ಆದಿತ್ಯರಾಮ್‌ರವರು Indian Institute of World Culture ನಲ್ಲಿ ನಡೆದ ಸಂಗೀತ ಕಾರ್ಯಕ್ರಮದಲ್ಲಿ Rhythm Pad ನುಡಿಸಿದ ಸಂದರ್ಭ.



ಸದಸ್ಯ ಶ್ರೀ ವೈ.ಜಿ.ನಾರಾಯಣ್‌ರವರ ಪುತ್ರಿ ಶ್ರೀಮತಿ ವಾಣಿಶ್ರೀ ಸುನಿಲ್‌ರವರು ತಿರುಮಲ–ತಿರುಪತಿ ದೇವಸ್ಥಾನದಲ್ಲಿ ಸಂಗೀತ ಸೇವೆ ಸಲ್ಲಿಸಿದರು.




ಸದಸ್ಯ ಅಜಯ್ ರಾಜಾಪುರ ಅವರ ಪತ್ನಿ ಶ್ರೀಮತಿ ಲಕ್ಷ್ಮೀಶ್ರೀ ಅವರು ಸಂಗೀತ ಕ್ಷೇತ್ರದಲ್ಲಿನ ಸೇವೆಗಾಗಿ ಯೋಗ ಸಂಸ್ಕೃತಂ ವಿಶ್ವವಿದ್ಯಾಲಯದಿಂದ ಸನ್ಮಾನಿತರಾದರು.




ಸಂಘದ ಪೋಷಕ ಹಾಗೂ ಲೆಕ್ಕ ಪರಿಶೋಧಕ ಶ್ರೀ ಬಿ.ಎನ್.ಜಿ.ಪ್ರಸಾದ್‌ರವರು ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿ ಮಠದ ಗಾನ ಲಹರಿ ಕಾರ್ಯಕ್ರಮದಲ್ಲಿ ಸಂಗೀತ ಸೇವೆ ಸಲ್ಲಿಸಿದರು.

# ಅಭಿನಂದನೆಗಳು



ನಮ್ಮ ಬೃಹಚ್ಚರಣ ಸಂಘದ ಸದಸ್ಯೆ ಸಂಧ್ಯಾ (ದಿ. ಈಶ್ವರ ಮೂರ್ತಿರವರ ಮಗಳು) ಮತ್ತು ಶ್ರೀ ರಾಜೇಂದ್ರ ಅರಳಿಕಟ್ಟೆ ಇವರ ಸುಪುತ್ರ ಶ್ರೀ ರಾಹುಲ್ ಅರಳಿಕಟ್ಟೆ ಇವರು ಡೆನ್ಮಾರ್ಕ್, ಕೋಪನ್ ಹೆಗನ್ ವಿಶ್ವವಿದ್ಯಾನಿಲಯದಲ್ಲಿ Ph.D ಮಾಡಿ ಡಾಕ್ಟರೇಟ್ ಪಡೆದಿದ್ದಾರೆ. Computer Science and Machine Learning ವಿಭಾಗದಲ್ಲಿ Natural Language Processing ಎಂಬ ವಿಷಯದ ಮೇಲೆ ಅವರು ಸಂಶೋಧನೆ ಮಾಡಿದ್ದಾರೆ.


ಈ ಸಾಧನೆಗಳಿಗೆ ಕಳಶವಿಟ್ಟಂತೆ ಇವರ ಹೆಸರಿನಲ್ಲಿ ಅದಾಗಲೇ 7 ಪೇಟೆಂಟ್‌ಗಳು ನೋಂದಾಯಿಸಲ್ಪಟ್ಟಿದೆ ಹಾಗೂ, 20 ಕ್ಕೂ ಹೆಚ್ಚು publication ಗಳು ಪ್ರಕಟವಾಗಿವೆ.

ಇದೀಗ ಕೆನಡಾ ದೇಶದ ಮ್ಯಾಕ್ ಗಿಲ್ ವಿಶ್ವವಿದ್ಯಾಲಯ ಶ್ರೀಯುತರನ್ನು ಸ್ನಾತಕೋತ್ತರ ಸಂಶೋಧಕರನ್ನಾಗಿ ನೇಮಕ ಮಾಡಿಕೊಂಡಿದೆ.

ವಿದೇಶದಲ್ಲಿ ಇಂತಹ ಸಾಧನೆಗೈದಿರುವ ರಾಹುಲ್ ಅವರಿಗೆ ಬೃಹಚ್ಚರಣ ಸಂಘದ ಹಾರ್ದಿಕ ಅಭಿನಂದನೆಗಳು



ಕರಕುಶಲ ಕಲೆ – ವೀಣಾ ವಿಶ್ವನಾಥ್
ಲೇಖನ ಪುಟ 7



ರೇಖಾಚಿತ್ರ – ಅಭಿಲಾಷಾ ಪ್ರದೀಪ್ ಕುಮಾರ್





ರೇಖಾಚಿತ್ರಗಳು – ಗಿರಿಜಾಮಣಿ ನಾಗರಾಜ



ರಂಗೋಲಿ – ಪಲ್ಲವಿ ಗುರು ಪ್ರಸನ್ನ



ರೇಖಾಚಿತ್ರ – ಗಿರಿಜಾಮಣಿ ನಾಗರಾಜ

*If undelivered please return to :*
*President*
**'Bruhacharana Sangha'**
No. 27/1, Bull Temple Road,
Basavanagudi,
Bengaluru - 560 004.

To,

Book-Post

Published by Sri B. Subramanyam, President, 'BRUHACHARANA SANGHA' No. 27/1, Bull Temple Road, Basavanagudi, Bengaluru - 560 004.
Printed at Keerthi Printers, Omkara, 240-F, 2nd D Cross, 2nd 'B' Main, Girinagar 1st Phase, Bengaluru - 560 085, Ph : 080-26722034